ಅಪರಂಜಿ

ನವೆಂಬರ್ 96

ತಿಳಿನಗೆಯ ಕಾರಂಜಿ



* ಪ್ರಕಾಶ್
* ಅ. ರಾ. ಮಿತ್ರ
* ರಾಶಿ ಹೇಳಿದ್ದು
* ಅರುಣ ಕಾರಂತ
* ಡಾ. ಶ್ರೀ ವೆಂಕಟರಮಣ
* ಡಾ.ಎಚ್.ಎಂ. ಪಂಚಾಕ್ಷರಯ್ಯ
* ಶಿವು
* ಯು. ಎಸ್. ರಾವ್
* ಕಂಭಂ ಕೃಷ್ಣಮೂರ್ತಿ
* ಎಂ. ಎಸ್. ಕೆ. ಪ್ರಭು

ಬಿಡಿ ಪ್ರತಿ : 3 ರೂ. 50 ಪೈ



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 14 ನವೆಂಬರ್ 96 ಸಂಚಿಕೆ-2


ಹೇಗೆ ಹಕ್ಕಿಯಾಗಲಿ ಗರುಡನಾಗಲೀ ತಿರುಗಾಡಿ ಗೂಡಿನ ಬಳಿಗೇ ಬರುವುದೋ....

-ಬೃಹದಾರಣ್ಯಕ

ಹಾಗೆ ಎಲ್ಲರೂ ಹಗರಣಗಳತ್ತ ಹೊರಳಿ ಬರುತ್ತಾರೆ. ಅಧಿಕಾರ ಭಂಡತನಗಳಿದ್ದರೆ ಅವು ಏನೂ ಮಾಡುವುದಿಲ್ಲ. ಇಲ್ಲದಿದ್ದರೆ ಇದ್ದವರಿಗೆ ಬೆಣ್ಣೆಹಚ್ಚಿದರಾಯಿತು.

ಇದು ಹೇಂದರೆ, ಎಚ್ಚೆತ್ತಾಗ ಕೈ ಸುಟ್ಟುಕೊಂಡು, ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡು, ಇಲ್ಲವೇ ಧರೆಯೊಳು ಎನ್ನಯ ಸಮಾನರಾರು ಎಂದುಕೊಂಡು ಗಾಯಕರ, ಪಾಠಕರ, ಭಂಡರ ಬಯಕೆಗಳನ್ನು ಸರಿಸಿ, ಜೀವನು ನಿದ್ದೆಮಾಡುತ್ತಾನೆ.

ಶ್ರೀ ಸಾಮಾನ್ಯನು ಮುನ್ನೆ ಮಾಡಿದ ಕರ್ಮ ಫಲವದು ಬೆನ್ನಬಿಡುವುದೆ ಎಂದುಕೊಂಡು ಜಡಸ್ವರ್ಗದಲ್ಲಿ ಸಂಮೂಢವೆಂಬ ಸಿಂಹಾಸನದಲ್ಲಿ ರಾರಾಜಿಸುತ್ತಾನೆ.





ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3. 50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 14 **ನವೆಂಬರ್ 96** **ಸಂಚಿಕೆ- 2**

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



O ಪ್ರಕಾಶ್

ಬೆಂಗಳೂರಿನಲ್ಲಿ ವಿಶ್ವಸುಂದರಿ ಸ್ಪರ್ಧೆ

-ಸುದ್ದಿ

ಬೆಳಗಾದರೆ ಕರೆಂಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ!!

★ ★ ★

ಭಾರತದಲ್ಲಿ ಆಡುವುದು ನಮಗೊಂದು ಸವಾಲು

- ಆಸ್ಟ್ರೇಲಿಯಾ ನಾಯಕ

ನಮಗೂ ಅಷ್ಟೆ!!

★ ★ ★

ಗಾಂಧೀ ತತ್ವ ಪಾಲಿಸಲು ಯುವಕರಿಗೆ ಕರೆ

-ಸುದ್ದಿ

ಸುದ್ದಿ ಕೇಳಿ ಗಾಂಧಿ ಚಕಿತರಾದರಂತೆ!

★ ★ ★

ದಂತ ಕಾಲೇಜು; ಹೈಕೋರ್ಟ್ ಕಟ್ಟಪ್ಪಣೆ

-ಪತ್ರಿಕೆ

ಅಲ್ಲಂತೂ ಕ್ಯಾವಿಟಿಗಳಿರಬಾರದು!

★ ★ ★

ನ್ಯಾಯಮೂರ್ತಿ - ಪ್ರಧಾನಿ ಮಧ್ಯರಾತ್ರಿ ಭೇಟಿಗೆ ಪ್ರತಿಭಟನೆ

- ಸುದ್ದಿ

"Freedom at Midnight!!"

★ ★ ★

''ವೈದ್ಯಕೀಯ ಪ್ರವೇಶ; ಮತ್ತಷ್ಟು ವಿಳಂಬ''

''ಕಿರಿಯ ವೈದ್ಯರ ಮುಷ್ಕರ ಹತ್ತನೇ ದಿನಕ್ಕೆ''

ಪತ್ರಿಕೆಯ ಒಂದೇ ಪುಟದ ಸುದ್ದಿಗಳು!!

★ ★ ★

ವೇಟ್ ಲಿಫ್ಟಿಂಗ್ ಸ್ಪರ್ಧೆಗೆ ರಂಗ ಸಜ್ಜು

ಪ್ಲಾಟ್‌ಫಾರ್ಮ್ ಭದ್ರ ಇರಬೇಕು!!


★ ★ ★

ನವೆಂಬರ್‌ನಲ್ಲಿ ಸಿ. ಇ.ಟಿ. ಸಂದರ್ಶನ ಆರಂಭಿಸಲು ನಿರ್ಧಾರ

-ಸುದ್ದಿ

ಇದು ಭಗವಂತನ ದರ್ಶನದಷ್ಟೆ ದುರ್ಲಭ!!

★ ★ ★



''ಮಹಾ ಓದ್ತಾನಂತೆ ಕುಡುಮಿ, ಬಾರೋ ಆಡುಕ್ಕೆ''

ಉಡುಗೊರೆ

ಅ.ರಾ.ಮಿತ್ರ

''ನೋಡು ಉಡುಗೊರೆ ಪದ್ಧತಿ
ಇವತ್ತಿಂದ ರದ್ದತಿ
ಏನಂತಿ''

''ಅಲ್ರೀ ನಮಗೆ ನಾಚ್ಕೆ ಆಗೊಲ್ವಾ
ಎಲ್ರೆದುರಿಗೆ ಪೆಚ್ಚಾಗುಲ್ವಾ?
ತನ್ನಿ ಉಡುಗೊರೆ''
- ಅಂತ ನನ್ನಾಕೆ ಸಿಡುಕಿರೆ

''ಅಲ್ಲಕಣೆ
ತಿಂಗಳಿಗೆ ಸರಾಸರಿ ಎರಡು ಮದುವೆ ಅಂದ್ರೂ
ಉಡುಗೊರೆ ಖರ್ಚು
ಪ್ರವಾಸದ ಖರ್ಚು
ಕಾಲದ ಖರ್ಚು
ಎಲ್ಲ ಸೇರಿ
ನನ್ನ ಆದಾಯದ ಮೈಗೆಲ್ಲ ಆಗಿದೆ ತರಚು
ಜೋಬೆಲ್ಲ ಪರಚು''

''ಹಾಗಲ್ಲಾಂದ್ರೆ ಎಂದ್ನಿಂದ ಬಂದ ಸಂಪ್ರದಾಯ
ನೀವು ಹೇಳ್ತಾ ಇದೀರಿ ವಿದಾಯ
ಹಾಗಾದರೆ ನಿಮ್ಮ ತಮ್ಮನ ಮಗ ಹೆಗ್ಣ
ಆಗ್ತಿದಾನಲ್ಲ ಲಗ್ನ
ಆಗ ಉಡುಗೊರೆ ಭಗ್ನ?''

''ಛೆ! ಛೆ! ಎಲ್ಲಾದ್ರೂ ಉಂಟ
ಅವ ನನ್ನ ರಕ್ತದ್ ನಂಟ''
''ಹಾಗಾದ್ರೆ ನನ್ನ ತಂಗೀ ಮಗಳು

ಕಟ್ಟಿಸ್ಕೊತಾಳೆ ತಾಳಿ
ಅದಕ್ಕೇನಂತೀರಿ ಹೇಳಿ''

- ಓಗೇ ಬೆಳೆಯುತ್ತ ಉಡುಗೊರೆ ಪಟ್ಟಿ
ನಮ್ಮನ್ನ
ಪದ್ಧತಿ ಕಂಬಕ್ ಕಟ್ಟಿ
ಅಲ್ಲ ಇದೆಂಥ ರೀತಿ ರಿವಾಜು
ಈ ಉಡುಗೊರೆ ಅನ್ನೋ ಮೋಜು
ಹಿಂದೆ ಯಾವೋನೋ ಒಬ್ಬ ಪಡಪೋಶಿ
ವಿಘ್ನ ಸಂತೋಷಿ

ಎಸೆದು ಹೋದ ಪಾರ್ಥೇನಿಯಂ ಬೀಜ.
ನಡುವೆ ಇರೋ ನಾವೆಲ್ಲ
I mean
'ನಡು'ವೇ ಇಲ್ಲದ ನಾವೆಲ್ಲ
ಹೊಲಿಸಿಕೊಂಡ ತಪ್ಪಿಗೆ 'ಕಾಜ'
ಗುಂಡಿ ತರಬೇಕಾದ್ ಸಾಜ



''ನಾನು ನಂ ಪುಟ್ಟೀಗೆ ಹೇಳ್ಬಿಟ್ಟೆ, ಬ್ಯೂಟಿ ಕಾಂಟೆಸ್ಟ್‌ಗೆ ಟಿಕೆಟ್ ಇಲ್ಲ ಅಂತ. ಕಾಂಟೆಸ್ಟೆಂಟಾಗಿ ಬೇಕಾದ್ರೆ ಹೋಗ್ಲಿ. ಅಲ್ವೇನ್ರೀ''

ಕೂಗು ಮಾರಿ ಕಥೆ

ರಾ.ಶಿ. ಹೇಳಿದ್ದು

ಸಕತ್ ಸನ್ನಿ ಬಂದವರನ್ನು ಬಡ ಬಡ ಅಂತ ಅರ್ಥವಿಲ್ಲದ ಮಾತಾಡಿಕೊಳ್ಳುತ್ತಾರಲ್ಲ! ಅಂತಹವರು ಆಗ ಸತ್ತುಹೋದರೆ, ಕೂಗುಮಾರಿಯಾಗುತ್ತಾರಂತೆ. ರಾತ್ರಿಹೊತ್ತು ಬಂದು ಬಾಗಿಲು ತಟ್ಟುತ್ತಾರಂತೆ. ಪೆಚ್ಚುಪೆಚ್ಚಾಗಿ ಬಾಗಿಲು ತೆಗೆದರೆ ಒಳಕ್ಕೆ ಬಂದು ಮನೇಲಿ ಸೇರಿಕೊಂಡು ಯಾರನ್ನಾದರೂ ಹಿಡಿದುಕೊಂಡು ಬಿಡ್ತಾರಂತೆ. ಆದರೆ ಬಾಗಿಲ ಮೇಲೆ ಮೂರು ನಾಮ ಬಳಿದು ನಾಳೆ ಅಂತ ಬರೆದರೆ, ಕೂಗುಮಾರಿ ಬಾಗಿಲು ತಟ್ಟಕ್ಕೆ ಮುಂಚೆ, ಬರೆದದ್ದನ್ನು ಓದುತ್ತಂತೆ. ಓಹೋ! ನಾಳೆ ಅಂತ ಬರೆದಿದ್ದಾರೆ, ನಾಳೆ ಬಂದು ಬಾಗಿಲು ತಟ್ಟಿದರೆ ಬಾಗಿಲು ತೆರೆಯುತ್ತಾರೆ ಅಂತ ತಿಳಿದುಕೊಂಡು, ಬಾಗಿಲು ತಟ್ಟದೆ ಹೊರಟು ಹೋಗುತ್ತಂತೆ.

ಇಂದಾನೊಂದು ಕಾಲದಲ್ಲಿ ಬಾಳಪೇಟೆಯ ಮೂರನೆ ಅಡ್ಡರಸ್ತೆಯಲ್ಲಿ ಹಳೆ ಕಾಲದ ಎಂಟಂಕಣದ ಮನೆ ಒಂದಿತ್ತಂತೆ. ಆ ಮನೆ ಬಾಗಿಲ ಮೇಲೆ ನಾಮವನ್ನೂ ಹಾಕಿತ್ತಲ್ಲವಂತೆ, ನಾಳೆ ಅಂತ ಬರೆದೂ ಇತ್ತಿಲ್ಲವಂತೆ. ರಾತ್ರಿಯಲ್ಲಿ ಬಂದ ಕೂಗುಮಾರಿ ಬಾಗಿಲು ತಟ್ಟಿದಾಗ, ಮನೆಯ ಮೊದಲನೆಯ ಮಗನೇ ಹೋಗಿ ಬಾಗಿಲು ತೆಗೆದನಂತೆ. ಕೂಗುಮಾರಿಗೆ ಬಲು ಖುಷಿಯಾಯ್ತಂತೆ. ಅವನನ್ನು ನಗುತ್ತಾ ತಬ್ಬಿಕೊಂಡು, ಕಡೆಗೆ ಮೆಟ್ಟಿಕೊಂಡಿತಂತೆ. ಯಾರೂ ಬಾಗಿಲ ಹೊರಗೆ ಇದ್ದುದನ್ನು ಕಾಣದೆ ಮನೆಯ ಮಗ ಬಾಗಿಲು ಹಾಕಿಕೊಂಡು, ಮಲಗಲು ಹಿಂತಿರುಗಿದಾಗ ಅವನ ತಲೆ ಸ್ವಲ್ಪ ಹಗುರಾದುದನ್ನು ಗಮನಿಸಿದನಂತೆ. ಬಾಗಿಲು ತೆಗೆದಾಗ ಥಂಡಿಯ ಹೊರಗಿನ ಗಾಳಿ ಬಡಿದು ಹೀಗಾಗಿರಬಹುದು ಎಂದು ಮನಸ್ಸಿನಲ್ಲಿಯೇ ಅಂದುಕೊಂಡನಂತೆ.

ಬೆಳಗಾಗಿ ಎದ್ದು ಎಲ್ಲರ ಜೊತೆಯಲ್ಲೂ ಕಾಫಿ ತಿಂಡಿಗೆ ಕುಳಿತಾಗ. ''ಏನಮ್ಮಾ ಇದು, ಉಪ್ಪಿಟ್ಟಿಗೆ ಇಷ್ಟು ತುಪ್ಪ ಹಾಕಿದೀಯಲ್ಲಮ್ಮಾ; ಇಷ್ಟು ಜಿಡ್ಡು ತಿಂದರೆ ಅಪ್ಪನಿಗೆ ರಕ್ತದ ಒತ್ತಡ ಹೆಚ್ಚಾಗುತ್ತಲ್ಲಮ್ಮಾ!'' ಎಂದು ಶುರುಮಾಡಿದನಂತೆ. ನಿಮ್ಮಪ್ಪನಿಗೆ ಬಡಿಸಿದ ಉಪ್ಪಿಟ್ಟಿಗೆ ತುಪ್ಪ ಹಾಕಿಲ್ಲ, ಮಗೂ, ನಿನಗೆ ಜಿಡ್ಡು ಇಷ್ಟ ಅಂತ ನಿನಗೆ ಬಡಿಸಿದ ಉಪ್ಪಿಟ್ಟಿಗೆ ಮಾತ್ರ ಬೆಣ್ಣೆಕಾಯಿಸಿದ ಘಂ ಅಂತಿರುವ ತುಪ್ಪವನ್ನು ಹೆಚ್ಚಾಗಿ ಕಲಸಿದೆಕಣಪ್ಪಾ! ಎಂದು ಅಮ್ಮ ಸಮಾಧಾನ ಹೇಳಿದರೆ, ''ನನಗೆ ರಕ್ತದ ಒತ್ತಡ ಬಂದರೂ ಪರವಾಗಿಲ್ಲ, ನಾವು ಐದುಜನ ಗಂಡು ಮಕ್ಕಳು: ಆದರೆ ಒಬ್ಬನೇ ಗಂಡ, ಅವನಿಗೆ ರಕ್ತದ ಒತ್ತಡ ಬರಬಾರದು ಅಂತಲೇನಮ್ಮಾ'' ಎಂದು ವಿತಂಡವಾದವನ್ನು ಮುಂದು ಮಾಡಿದನಂತೆ.

''ಏನೋ, ಪ್ರೀತಿ ನಿನಗೆ ಅಂತ ತುಪ್ಪ ಕಲಸಿ ಉಪ್ಪಿಟ್ಟು ಬಡಿಸಿದರೆ ಸನ್ನಿ ಬಡಬಡಿಸೋ ಹಾಗೆ ಏನೇನೋ ಅಂತೀಯಲ್ಲೋ. ಮಂಕು ಮುಂಡೇದೇ! ತೆಪ್ಪನೆ ಕೂತುಕೊಂಡು ತಿನ್ನು. ಬೇಡದೆ ಇದ್ದರೆ ಎದ್ದು ಹೋಗು'' ಅಂತ ಅಪ್ಪ ಗದರಿಸಿ ಕೊಂಡರಂತೆ.

''ಇದ್ದ ವಿಷಯಾನ ಇದ್ದ ಹಾಗೆ ಹೇಳಿದರೆ, ಅದರ ಅರ್ಥ ಹೀಗಿರಬಹುದು ಎಂದು ವಿಚಾರ ಮಾಡಿ ಹೇಳಿದರೆ, ಕಂಡದ್ದನ್ನು ಕಂಡ ಹಾಗೇ ಹೇಳಿದರೆ ನೀವ್ಯಾಕೆ ಕೆಂಡದ ಹಾಗೆ ಕೋಪಿಸ್ಕೋತೀರಪ್ಪ!'' ಎಂದನಂತೆ ಮಗ.

''ಏನಾಗಿದೆಯೇ ನಿನ್ನ ಮಗನಿಗೆ, ಹುಚ್ಚು ಹುಚ್ಚಾಗಿ ಬಡ ಬಡಿಸ್ತಾ ಇದ್ದಾನೆ. ನೀನು ಮಾಡಿದ ಮುದ್ದಿನ ಫಲ ಇದು. ಎರಡು ತಪರಾಕು ಹಾಕಿ ಒದ್ದು ಬುದ್ಧಿಕಲಿಸಬೇಕು'' ಅಂತ ಹೇಳುತ್ತಾ ಅಪ್ಪ ಎದ್ದರಂತೆ.

ಅಪ್ಪ ಅಜಾನುಬಾಹು, ಗರಡಿ ಮಾಡಿದ ಆಳು, ಮಗ ಅಮ್ಮನ್ನ ಹೋತುಕೊಂಡಿದ್ದ. ಅಮ್ಮ ಕಂಚಿಕಡಸನ್ನು ಹೋತುಕೊಂಡಿದ್ದಳು. ಅಂದಮೇಲೆ ಅಪ್ಪ ಎದ್ದು ಒದೆಯಕ್ಕೆ ಅಂತ ಕಾಲಿಗೆ ಝೋಕು ಕೊಟ್ಟಾಗ ಮಗ ಅಲ್ಲಿಂದ ಕಂಬಿ ಕಿತ್ತನಂತೆ. ಆ ಮನೆಯಿಂದಲೇ ಓಡಿ ಹೋದನಂತೆ.


ಹೋದೋನು ನಾಲ್ಕು ಜನರು ಸೇರಿದ್ದ ಕಡೆಯೆಲ್ಲಾ ಬಡಬಡಿಸುಕ್ಕೆ ಶುರು ಮಾಡಿದನಂತೆ. ಇವನು ಹೇಳಿದ್ದು ಯಾರಿಗೂ ಅರ್ಥವಾಗದೆ ಇದ್ದರೂ ಬಹಳ ಚೆನ್ನಾಗಿ ಮಾತನಾಡ್ತಾನಲ್ಲ ಸ್ವಲ್ಪವೂ ತಡವರಿಸುವುದಿಲ್ಲವಲ್ಲ! ಇವನು ಹೇಳೋದರಲ್ಲಿ ಸತ್ಯ ಇರಬೇಕು ಎಂದು ಜನರು ಹೇಳುಕ್ಕೆ ಶುರುಮಾಡಿದರಂತೆ.

ಪಾಪ! ಅವರಿಗ್ಯಾರಿಗೂ ಗೊತ್ತಿಲ್ಲ. ಕೂಗು ಮಾರಿ ಅಮರಿಕೊಂಡಿದೆ ಇವನನ್ನ ಅಂತ.

ಜನದ ಬಾಯನ್ನು ಕುಟ್ಟಕ್ಕೆ ಸಾಧ್ಯವೇ? ಬಹಳ ಶಹಣ. ಬಹಳ ವಿಚಾರ ಮಾಡಿ ತಕರಹೂಡಿ ಮುಂದಾಗುವುದನ್ನು ಇಂದೇ ಊಹಿಸಿ ಹೇಳ್ತಾನೆ ಅಂತ ಜನರು ಅನ್ನುಕ್ಕೆ ಶುರು ಮಾಡಿದರು. ಅನ್ನುಕೆ ಶುರು ಮಾಡಿದವರು ನೀವೇ ನಮ್ಮ ನಾಯಕ ಕಣಪ್ಪಾ ಅಂತ ಆರಿಸಿಯೂ ಬಿಟ್ಟರು. ಕಡೆಗೆ ರಾಜ್ಯದ ಆಡಳಿತವನ್ನು ಅವನ ಕೈಗೆ ಕಂಕಣ ಕಟ್ಟಿದ ಹಾಗೆ ಕಟ್ಟೇಬಿಟ್ಟರು.

ರಾಜ್ಯದ ಆಡಳಿತವನ್ನು ಸುಸೂತ್ರವಾಗಿ ನೆರವೇರಿಸಬೇಕಾದರೆ ಏನೇನು ಗುಣಗಳಿರಬೇಕೋ ಅವುಗಳಲ್ಲಿ ಒಂದಾದರೂ ಇವನಿಗಿತ್ತಿಲ್ಲ. ಪಾಪ, ಅವನೇನು ಮಾಡಬೇಕು? ರಾಜ್ಯ ಪುರೋಹಿತರವನ್ನು ಕರೆಸಿ, ಜಾತಕ ನೋಡಿಹೇಳಿ ಮುಂದೆ ಹೇಗೆ ಎಂದು ಕೇಳಿದನಂತೆ. ರಾಜ್ಯ ಪುರೋಹಿತರು ಜಾತಕ ನೋಡಿದರು, ಕವಡೆ ಹಾಕಿ ನೋಡಿದರು, ಎಲ್ಲವೂ ತಿಳಿಯಿತು. ''ಮಹಾರಾಯರೇ? ನಿಮಗೆ ಕೆಲವು ಕಾಲದ ಹಿಂದೆ ಕೂಗುಮಾರಿ ಅಮರಿಕೊಂಡಿತು. ಅವತ್ತಿನಿಂದಲೇ ನೀವು

ಭಾಷಣಾಪ್ರವೀಣರಾದುದು, ಸನ್ನಿ ಬಂದವರ ಹಾಗೆ ಮಾತನಾಡಿ ಜಯಿಸಿರೋದು. ಈಗ ಆಡಳಿತ ಮಾಡಬೇಕು. ಕೂಗು ಮಾರಿಯಿಂದ ಇದು ಸಾಧ್ಯವಿಲ್ಲ. ಅದಕ್ಕೋಸ್ಕರ ಕೂಗು ಮಾರೀನ ಬಿಡಿಸಬೇಕು, ಅದಕ್ಕೆ ಒಂದೇ ದಾರಿ ನಾಮ ಹಾಕೋದು ''ನಾಳೆ'' ಅಂತ ಮಂತ್ರ ಉಚ್ಚರಿಸುವುದು.'' ಎಂದು ರಾಜ್ಯ ಪುರೋಹಿತರು ಹೇಳಿದರಂತೆ.



ಅವತ್ತಿನಿಂದ ರಾಜ್ಯಭಾರ ಸುಸೂತ್ರವಾಗಿ ನಡೆಯಿತಂತೆ. ಕಂಡವರಿಗೆಲ್ಲಾ ಬಂದವರಿಗೆಲ್ಲಾ ನಾಮ ಹಾಕೋದು; ''ನಾಳೆ'' ಆಗಲಿ, ''ನಾಳೆ'' ನೋಡೋಣ, ''ನಾಳೆ'' ಪರಿಶೀಲಿಸುತ್ತೇನೆ. ''ನಾಳೆ'' ಮಾಡಿಕೊಡುತ್ತೇನೆ, ಇತ್ಯಾದಿ ನಾಳೆ ಮಂತ್ರವನ್ನು ಜಪಿಸಲಾರಂಭಿಸಿದನಂತೆ.

ಈಗರ್ಥವಾಯ್ತೇ ಮಗು, ನಾಳೆ ಅಂತ ಯಾಕೆ ಮುಂದೂಡ್ತಾ ಕಾಲ ಹಾಕ್ತಾರೆ; ಕೂಗು ಮಾರಿ ಬಡಿದು ಮೇಲಕ್ಕೆ ಬಂದವರೆಲ್ಲಾ, ನಾಳೆ ಮಂತ್ರೋಚ್ಚಾರಣೆ ಮಾಡಿ ಬಾಳ್ತಾರೆ, ಅಂತ ನವ್ವ ಅಡುಗುಲಜ್ಜಿ ಕೂಗುಮಾರಿ ಕತೆ ಹೇಳಿದಳಂತೆ.

ಭೂಷಣಕೆ ಭೂಷಣ ಇದು ಭೂಷಣ

ಶ್ರೀಮತಿ ಅರುಣಾ ಆರ್. ಕಾರಂತ.

ನನಗೆ ಚಿಕ್ಕಂದಿನಲ್ಲಿ ನನ್ನ ತಂದೆ ದಾಡಿ ಮಾಡಿಕೊಳ್ಳುತ್ತಿರುವುದುನ್ನು ನೋಡುವುದೆಂದರೆ ತುಂಬ ಕುತೂಹಲದ ಸಂಗತಿಯಾಗಿತ್ತು.

ಅವರು ಪ್ರತಿ ಎರಡು ದಿನಗಳಿಗೊಮ್ಮೆ ದಾಡಿ ಮಾಡಿಕೊಳ್ಳುತ್ತಿದ್ದರು. ಆಗೆಲ್ಲ ಅವರು. ಕ್ಷೌರದ ಪೆಟ್ಟಿಗೆಯನ್ನು ಇದಿರಲ್ಲಿಟ್ಟುಕೊಂಡು ಬರಿಮೈಯಲ್ಲಿ ಕನ್ನಡಿಯ ಮುಂದೆ ಕುಳಿತುಕೊಂಡರೆ ನಮ್ಮ ಕುತೂಹಲ ಗರಿಬಿಚ್ಚಿ ಕುಣಿಯುತ್ತಿತ್ತು. ಏನಿರಬಹುದಪ್ಪ ಏನಿರಬಹುದೋ ಏನಿರಬಹುದಣ್ಣ, ಒಳಗೆ ಒಳಗೆ..... ಒಳಗೆ.... ಒಳಗೆ.... ಒಳಗೆ... ಒಳಗೆ!? ನಮ್ಮ ದೃಷ್ಟಿಯಲ್ಲಿ ಆ ಕ್ಷೌರದ ಪೆಟ್ಟಿಗೆ ಒಂದು ಅದ್ಭುತ ಜಾದೂಗಾರನ ಪೆಟ್ಟಿಗೆಯಿದ್ದಂತೆ ಅಲ್ಲಿರುವ ವಸ್ತುಗಳು ಒಂದೇ ಎರಡೇ ಹರಿತವಾದ ಕತ್ತಿಯಿಂದ್ಹಿಡಿದು, ಸುಂದರವಾದ ಚಿಕ್ಕ ಕತ್ತರಿ, ಉಗುರು ತೆಗೆಯುವ ಸಾಧನ, ಕೊನೆಗೆ ಕಿವಿಯ ಕುಗ್ಗಿ ತೆಗೆಯುವ ಸಾಧನ, ಜೊತೆಯಲ್ಲಿ ಏನೇನೋ ಔಷಧಿಗಳು, ಆ ಕ್ಷೌರದ ಕತ್ತಿಯೋ ಎಷ್ಟೊಂದು ಹರಿತ! ನೋಡಿದರೆ ಬೆಚ್ಚಿಬೀಳುವಂತಿರುತ್ತಿತ್ತು ನಮ್ಮ ತಂದೆ ಮೈಮೇಲೆ ಶುಭ್ರವಾದ ಬಟ್ಟೆಯನ್ನು ಹೊದ್ದುಕೊಂಡು, ಮುಖಕ್ಕೆ ಸೋಪು ಹಚ್ಚಿಕೊಂಡು ಬ್ರಷ್‌ನಿಂದ ಮೂಗು ಕಣ್ಣುಗಳೆರಡನ್ನು ಬಿಟ್ಟು ಉಳಿದೆಲ್ಲ ಭಾಗ ನೊರೆಯಿಂದಲಂಕೃತಗೊಂಡಾಗ ಅದನ್ನು ಕಂಡಾಗ ನಮಗೂ ತುಂಬಾ ಆಶೆಯಾಗಿ ''ಅಪ್ಪ ನಮಗ್ಯಾವಾಗ ಮೀಸೆ ಬರ್ತದೆ'' ಎಂದು ಕೇಳುತ್ತಿದ್ದೆವು. ಆಗೆಲ್ಲ ಹೋಗೆ ಗಂಡುಬೀರಿ. ಹೆಣ್ಣುಮಕ್ಕಳಿಗೆಲ್ಲ ಮೀಸೆಯೆಲ್ಲಿ ಬರ್ತದೆ' ಎನ್ನುತ್ತಿದ್ದಾಗ ಪೆಚ್ಚುಮೋರೆ ಹಾಕ್ಕೊಂಡು ಅವರ ಮುಖಕ್ಷೌರ ಪೂರ್ತಿಯಾಗುವ ತನಕ ಕುಳಿತಿರುತ್ತಿದ್ದೆವು.

ಅಂದಿನ ಕುತೂಹಲ ಮೀಸೆಯ ಬಗೆಗಿನ ಆಕರ್ಷಣೆ ಇಂದಿನ ತನಕವೂ ಕಡಿಮೆಯಾಗಲೇ ಇಲ್ಲ. ಈಗಲೂ ನನ್ನ ಬಳಿ ಹಿಟ್ಲರ್‌ನ ಫ್ರೆಂಚ್‌ಕಟ್ ಮೀಸೆಯಿಂದ್ಹಿಡಿದು ಮುಮ್ಮಡಿ ಕೃಷ್ಣರಾಜ ಒಡೆಯರ್‌ರ ಗಿರಿಜಾಮೀಸೆಯ ತನಕವೂ ವಿವಿಧ ಆಕಾರದ, ಗಾತ್ರದ ಮೀಸೆಯುಳ್ಳವರ ಕುತೂಹಲಕರ ಸಂಗ್ರಹವೇ ಇದೆ ನಮ್ಮಣ್ಣಂದಿರಿಗೆಲ್ಲ ದಪ್ಪನಾದ ಮೀಸೆಯಿದ್ದರೂ ನನ್ನ ಕಲ್ಪನೆಯಂತೆ ಅವುಗಳ ಆಕಾರ ತಿದ್ದುವಂತೆ ಮಾಡುವ ಧೈರ್ಯ ಬರುತ್ತಿದ್ದಿಲ್ಲ. ಮುಂದೆ ನನ್ನ ಮದುವೆಯ ಪ್ರಸ್ತಾಪ ಬಂದಾಗ ಮೀಸೆಯಿದ್ದವರನ್ನೇ ಮದುವೆಯಾಗಬೇಕೆಂದುಕೊಂಡೆ. ಮೀಸೆಯಿಲ್ಲದ ಮುಖ ನನ್ನ ದೃಷ್ಟಿಯಲ್ಲಿ ವ್ಯಕ್ತಿ ಎಷ್ಟೇ ಉನ್ನತ ಸ್ಥಾನ - ಮಾನದಲ್ಲಿದ್ದರೂ 'ಕಳಾಹೀನ' ಅಂತೆನ್ನಿಸುತ್ತಿತ್ತು. ಈಗಿನ ಮೀಸೆಯಿರದ ಸಿನೇಮಾದ ಹೀರೋಗಳನ್ನು ಕಂಡಾಗ 'ಛೀ' ಮೀಸೆಯಿರದ ಇವರೆಂಥಾ ಗಂಡಸರಪ್ಪಾ ಎನ್ನಿಸ್ತದ.

ಮುಂದೆ ಚಿಗುರುಮೀಸೆಯ ನನ್ನವರ ಕೈಹಿಡಿದಾಗ ನನ್ನ ಕಲ್ಪನೆಯಂತೆ ಅವರ ಮುಖಕ್ಕೆ ಮೀಸೆಯನ್ನು ತುಂಬುವುದು ಮೊದಲ ಆದ್ಯತೆಯ ಕೆಲಸವಾಗಿತ್ತು. ಇವರೋ

ಮೊದಮೊದಲು ಶೇವ್ ಮಾಡಿಕೊಳ್ಳುತ್ತಿರುವಾಗ ಮೀಸೆಯನ್ನು ಟ್ರಿಮ್ ಮಾಡಿಕೊಳ್ಳಲಿಕ್ಕೋಸ್ಕರ ಈ ಕಡೆಯ ಮೀಸೆ ಗಿಡ್ಡವಾಯ್ತೆಂದು ಹೇಳಿ ಆಕಡೆಯ ಮೀಸೆಯನ್ನು ಗಿಡ್ಡ ಮಾಡಿಕೊಳ್ಳುತ್ತಿದ್ದರು.

ಒಟ್ಟಿನಲ್ಲಿ ಪ್ರತಿಬಾರಿಯೂ ಶೇವ್ ಮಾಡಿಕೊಳ್ಳುವಾಗ ಅವರ ಮೀಸೆ ಹೊಸ ಹೊಸ ಆಕಾರವನ್ನು ಪಡೆಯುತ್ತಿತ್ತು. ಒಮ್ಮೆಯಂತೂ ಮೂಗಿನ ಕೆಳಭಾಗದ ಮೀಸೆಯನ್ನು ಸರಿಪಡಿಸಿಕೊಳ್ಳಿಕ್ಕೋಸ್ಕರ ಸಂಪೂರ್ಣ ಮೀಸೆಯನ್ನು ಕಳೆದುಕೊಂಡು ಬಿಟ್ಟಿದ್ದರು. ಆಗ ಆದಿನ ಬೇಸರ ಮಾಡಿಕೊಂಡಷ್ಟು ನಾನು ಯಾವತ್ತೂ ಬೇಸರ ಮಾಡಿಕೊಂಡಿರಲಿಲ್ಲ. ಮುಂದೆ ಅವರು ಶೇವ್ ಮಾಡಿಕೊಳ್ಳುವಾಗೆಲ್ಲಾ ಕತ್ತರಿಯನ್ನು ಬಚ್ಚಿಡುವ ಕೆಲಸ ನನ್ನದನಾಯಿತು ಈಗಂತೂ ಅವರ ಮೀಸೆ ನೋಡುವ ಹಾಗಾಗಿದೆ. ಅತ್ತ ಗಿರಿಜಾಮೀಸೆಯಲ್ಲದಿದ್ದರೂ ಚಂದ್ರಶೇಖರ ಆಜಾದರ ಮೀಸೆಯಷ್ಟಾದರೂ ಬೆಳೆದಿದೆ. ಆದರು ಆಗೊಮ್ಮೆ ಈಗೊಮ್ಮೆ ಅವರಿವರ ಮಾತು ಕೇಳಿ ಇವರು ಮೀಸೆಗೆ ಕತ್ತರಿ ಪ್ರಯೋಗಿಸಲು ಮುಂದಾದದ್ದುಂಟು. ಯಾರೋ ಇವರ ಮೀಸೆಯನ್ನು ನೋಡಿ 'ವೀರಪ್ಪನ್' ಅಂದ್ರಂತೆ. ಇನ್ಯಾರೋ 'ಹಳ್ಳಿಯ ಗೌಡ' ಅಂದ್ರಂತೆ, ಮತ್ತೊಬ್ಬ ಅವರ ಸಹೋದ್ಯೋಗಿ ನಾಳೆ ಪ್ರಮೋಷನ್- ಇಂಟರ್‌ವ್ಯೂನಲ್ಲಿ ನಿಮ್ಮ ಮೀಸೆ ನೋಡಿ ಖಂಡಿತ ನಿಮ್ಮನ್ನು ಫೇಲ್ ಮಾಡ್ತಾರೆ ಅಂದ್ರಂತೆ ಆಗೆಲ್ಲ ಇವರ ಮನಸ್ಸು ವಿಚಲಿತಗೊಂಡದ್ದುಂಟು, ಆದರೆ ನಾನು ಬಿಟ್ಟೆನ್ಯೆ. ಮೀಸೆಯಿಲ್ಲದ ನಿಮ್ಮುಖ ಕಲ್ಪಿಸಲಿಕ್ಕೇ ಸಾಧ್ಯವಿಲ್ಲ. ಪ್ಲೀಸ್....ಪ್ಲೀಜ್... ಅಂದ್ರೆ ಅರ್ಧ ರಾಜ್ಯ ಕೊಡ್ತಾರೆ, ಎಂದು ಮುಂತಾಗಿ ರಮಿಸಿ ಮೀಸೆ ಮುಟ್ಟದಂತೆ ಮಾಡಿದ್ದೇನೆ. ನಮ್ಮ ಮಕ್ಕಿಗೂ ಅವರು ಮೀಸೆಗೆ ಕತ್ತರಿ ಪ್ರಯೋಗಿಸದಂತೆ ಜವಾಬ್ದಾರಿ ಹೊರಿಸಿದ್ದೇನೆ ಜೊತೆಯಲ್ಲಿ ಹುಲುಸಾಗಿ ಮೀಸೆ ಬೆಳೆಯಲು, ಮೀಸೆಯ ಆರೋಗ್ಯದ ಬಗ್ಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ತಂದಿರಿಸಿದ್ದೇನೆ. ಮೀಸೆಯಿಂದ ಗಿನ್ನೆಸ್ ದಾಖಲೆಯನ್ನು ಮಾಡಿಕೊಂಡವರ ಬಗೆಗೆಲ್ಲ ಅವರ ಕಿವಿಗೆ ಹೊಯ್ದಿದ್ದೇನೆ ನನಗಿಲ್ಲದ ಮೀಸೆ ನನ್ನವರ ತುಂಬು ಮೀಸೆಯನ್ನು ನೋಡಿ ಸಂತಸ ಪಡುತ್ತಿದ್ದೇನೆ. ನನ್ನ ಅರಳಿದ ಮುಖ ನೋಡಿ ನನ್ನವರು ಮೀಸೆಯಡಿಯಲ್ಲಿಯೇ ನಗುತ್ತಿದ್ದಾರೆ.

ನನ್ನ 'ಮೀಸೋಪಖ್ಯಾನ' ಮುಗಿಯಿತೆಂದು ತಿಳಿದರೂ. ಇಲ್ಲ, ಇಲ್ಲ, ಇದು ಆರಂಭವಷ್ಟೇ ನಾನು ನನ್ನವರೂ ಸೇರಿ ಮೀಸೆಯ ಬಗೆಗೆ ಒಂದು ಥೀಸಿಸ್ ಬರೆಯಬೇಕೆಂದಿದ್ದೇವೆ. ನಿಮ್ಮಿಂದ ಇಷ್ಟಷ್ಟು ಮಾಹಿತಿ ಸಂಗ್ರಹಿಸಿ!

ಭೂಷಣಕೆ ಭೂಷಣ ಇದು ಭೂಷಣ
ಕೋಮಲಾಂಗಿಯ ಕಣ್ಗೆ ಕಾಡಿಗೆಯೆ ಭೂಷಣ
ಕೋಗಿಲೆಯೆ ಭೂಷಣವು ವಾಸಂತಕೆ
ಪುರುಷಸಿಂಹನ ಮುಖಕೆ ಮೀಸೆಯೆ ಭೂಷಣವು
ಸೆಳೆಮಿಂಚೆ ಭೂಷಣವು ಮಳೆಗಾಲಕೆ
ಭೂಷಣಕೆ ಭೂಷಣ ಇದು ಭೂಷಣ

ಆಹಾ, ವಿವಾಹ!

ಡಾ|| ಶ್ರೀ ವೆಂಕಟರಮಣ

ಜೀವನದಲ್ಲಿ ಮದುವೆ ಸಾಕಷ್ಟು ಮುಖ್ಯ ಘಟನೆ. ಅದರ ಪರಿಣಾಮಗಳು ಹತ್ತು ಹಲವು. ಅತ್ತೆ ಮಾವಂದಿರು, ಮದುಮಗ, ಮದುಮಗಳು ಇಲ್ಲಿ ಮುಖ್ಯ ಪಾತ್ರಗಳಾದರೂ ಅಮುಖ್ಯತೆಯಿಂದ ಮುಖ್ಯತೆಗೇರುವ ಪಾತ್ರಗಳೂ ಹಲವೊಮ್ಮೆ ಇರುತ್ತವೆ. ಪರಿಣಾಮಗಳ ಪಟ್ಟಿಯಲ್ಲಿ ಪಾತ್ರವನ್ನವಲಂಭಿಸಿ ದಿವಾಳಿತನ, ಸ್ವಾತಂತ್ರ್ಯನಷ್ಟ, ಕೀಲಿಗೊಂಚಲು ಕೈಬದಲಾಯಿಸುವುದು, ದಾಸ(ಸಿ) ವರ್ಗದ ವಿಸ್ತರಣೆ ಮೊದಲಾದವು ಇವೆ. ಮದುವೆಗೆ ಸಂಬಂಧಿಸಿದ ಕೆಲವು ಮಾತುಗಳನ್ನು ಕೆಳಗೆ ಕೊಟ್ಟಿದೆ. ಅವು ಅಕಸ್ಮಾತ್ ನಿಮಗೆ ಅನ್ವಯಿಸುವುದಾದರೆ ಓದಿ, ನಕ್ಕುಬಿಟ್ಟು, ಯೋಚಿಸಿ; ಇಲ್ಲವಾದರೆ ಓದಿ, ಯೋಚಿಸಿ, ನಕ್ಕುಬಿಡಿ!

★ ★ ★

ವಿವಾಹವೊಂದು ವಿಚಿತ್ರ ಸಂಸ್ಥೆ. ಇಲ್ಲಿ ಒಳಗಿರುವವರು ಹೊರಹೋಗಲು ಬಯಸುತ್ತಾರೆ, ಹೊರಗಿರುವವರು ಒಳನುಗ್ಗಲು ಕಾತರರಾಗಿರುತ್ತಾರೆ.

★ ★ ★

ಮದುವೆಗಳು ಸ್ವರ್ಗದಲ್ಲಿ ನಡೆದು ಭೂಮಿಯ ಮೇಲೆ ಅನುಭವಿಸಲ್ಪಡುತ್ತವೆ.

★ ★ ★

ಗಂಡಹೆಂಡಿರ ವಾದ ನಾಣ್ಯಚಿಮ್ಮಿದಂತೆ. 'ತಲೆ' ಕಾಣಿಸಿಕೊಂಡರೆ ಅವನು ಸೋತಂತೆ, 'ಬಾಲ' ಕಾಣಿಸಿಕೊಂಡರೆ ಅವಳು ಗೆದ್ದಂತೆ!

★ ★ ★

ಪಾಪಚ್ಚಿ ಹೇಳಿದ, 'ನನ್ನ ವಿವಾಹ ಮುಕ್ಕಾಲುಭಾಗ ನಿಶ್ಚಯವಾಗಿದೆ.' ನಾನು ಒಪ್ಪಿದ್ದೇನೆ, ಛತ್ರದವರು ಮತ್ತು ಪುರೋಹಿತರೂ ಒಪ್ಪಿದ್ದಾರೆ. ಇನ್ನು ಬರಿಯ ಅವಳು ಒಪ್ಪಬೇಕು, ಅಷ್ಟೇ.

★ ★ ★

ವರದಕ್ಷಿಣೆ ಪದ್ಧತಿ ಖಂಡಿತ ತಪ್ಪಲ್ಲ. ಕನ್ಯಾದಾನದಲ್ಲಿ ದಕ್ಷಿಣೆ ಬೇಡವೇ?

★ ★ ★

ವಿವಾಹದ ಪ್ರಕರಣದಲ್ಲಿ ಪಾಣಿಗ್ರಹಣ, ಮಧುಚಂದ್ರ, ಅರ್ಧಚಂದ್ರ ಮತ್ತು ಪೂರ್ಣಗ್ರಹಣ- ಈ ಪದಗಳನ್ನು ಬಳಸಲು ಹೇರಳ ಅವಕಾಶ ದೊರೆಯುತ್ತವೆ.

★ ★ ★

ದಾಂಪತ್ಯದಲ್ಲಿ ಅವಳೇ 'ದಂ' ಅವನು ಬರಿಯ 'ಪತಿ' ಮಾತ್ರ. ಕೋಲುಮುಖದ, ದೊಡ್ಡಹೊಟ್ಟೆಯ ಹುಡುಗರನ್ನು, ಅವರು ಎಷ್ಟೇ ಬುದ್ಧಿವಂತರಾಗಿದ್ದರೂ, ಯಾವ ಹುಡುಗಿಯೂ ಒಪ್ಪುವುದಿಲ್ಲ? ಇದಕ್ಕೆ ಆಂಜನೇಯ ಮತ್ತು ಗಣೇಶರ ನಿರ್ದೇಶನ ಸಾಲದೇ?

ಗಂಡಹೆಂಡಿರ ವಿವಾದಕ್ಕೆ ಮಕ್ಕಳೇ ಸೂಕ್ತ ತೀರ್ಪುಗಾರರು.

★ ★ ★

ಪಾಣಿಗ್ರಹಣದ ಬಳಿಕ ಸತಿಪತಿಯರಲ್ಲಿ ಸಮಗತಿಯಲ್ಲಿ ಸಾಗುವುದೆಂದರೆ ವಯಸ್ಸು ಮಾತ್ರ; ಉದಾಹರಣೆಗೆ ಮದುವೆ ಕಳೆದು ಹತ್ತುವರ್ಷಗಳಾದಾಗ ಇಬ್ಬರ ವಯಸ್ಸೂ ಸಮನಾಗಿ ಹತ್ತುವರ್ಷಗಳಷ್ಟು ಏರಿರುತ್ತದೆ. ಉಳಿದೆಲ್ಲ ವಿಚಾರಗಳಲ್ಲಿ ಭಿನ್ನತೆಯಿರುತ್ತದೆ.

★ ★ ★

ತಿರುಪತಿಯಲ್ಲಿ ಅದೇ ಮದುಮಗನಿಗೆ ಅದೇ ಮದುಮಗಳನ್ನು ಮತ್ತೆ ಮತ್ತೆ ಮದುವೆ ಮಾಡಿಸುತ್ತಾರೆ. ವರನ ಹೆಸರು ಶ್ರೀನಿವಾಸ, ವಧು ಪದ್ಮಾವತಿ.

★ ★ ★

ಅತ್ತೆಯ ಕಿರುಕುಳವನ್ನು ಸೊಸೆ ನಗುನಗುತ್ತ ಸಹಿಸಬೇಕು; ಇಲ್ಲದಿದ್ದರೆ ಮುಂದೆ ಆಕೆಗೆ ತನ್ನ ಸೊಸೆಯ ಮೇಲೆ ದಬ್ಬಾಳಿಕೆಗೆ ಅಧಿಕಾರ ಬರದು.

★ ★ ★

ಅಳಿಯನಿಂದಾಗಿ ಮುಖ್ಯಮಂತ್ರಿ ಪದವಿ ಕಳೆದುಕೊಂಡವರ ನಿದರ್ಶನ ಆಂಧ್ರಪ್ರದೇಶದಲ್ಲಿ ಸಿಗುತ್ತದೆ; ಮದುವೆಯ ಅದ್ದೂರಿಯಿಂದಾಗಿ ಇದೇ ಪರಿಣಾಮವನ್ನು ಕಂಡವರ ಉದಾಹರಣೆ ತಮಿಳುನಾಡಿನಲ್ಲಿ ದೊರೆಯುತ್ತದೆ.

★ ★ ★

ಜಾಮಾತಾ ದಶಮಗ್ರಹವೇ ಸರಿ. ಕನ್ಯಾರಾಶಿಯಲ್ಲಿ ಆತ ನಿತ್ಯ ಇದ್ದು ಕಿರುಕುಳ ಕೊಡುತ್ತಲೇ ಇರುತ್ತಾನೆ.

★ ★ ★

'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಎನ್ನುವ ಮಾತು ನಿಜವಾಗಿಯೂ ನಿಜ; ಸೊಸೆಗೆ ಸೊಸೆ ಬಂದಾಗ ಇದು ನಿಜವಾಗುವುದಿಲ್ಲವೇ?

★ ★ ★

ಹಿಂದಿನ ಕಾಲದಲ್ಲಿ ನಾಲ್ಕು ದಿನಗಳಿಗೆ ಕಡಿಮೆಯಿಲ್ಲದಷ್ಟು ನಡೆಯುತ್ತಿದ್ದ ಮದುವೆಗಳು ನಲ್ವತ್ತು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಬಾಳುತ್ತಿದ್ದವು. ಇಂದಿನ ಒಂದು ದಿನ, ಅರ್ಧದಿನದ ಮದುವೆಗಳು ಅದಕ್ಕೆ ಅನುಪಾತೀಯವಾಗಿ ಬಾಳುತ್ತವೆ!

★ ★ ★

ಸಮುದ್ರದ ಆಳದಲ್ಲಿ, ಗಗನದ ಎತ್ತರದಲ್ಲಿ ವಿವಾಹಗಳು ಆರಂಭವಾಗುತ್ತವೆ; ಭೂಮಿಯವು ನಂಬಲರ್ಹವಲ್ಲವೆಂದು ಸಾಬೀತಾದ್ದರಿಂದ.

★ ★ ★


ಸೀತಾಪರಿಣಯದಲ್ಲಿ ಶ್ರಮವಹಿಸಿ ತೀರ ಸುಸ್ತಾದವನು ರಾವಣ; ಆರಾಮ ಇದ್ದವನು ಶ್ರೀರಾಮಚಂದ್ರ. ಇಂಥ ಉದಾಹರಣೆಗಳು ಇಂದಿನ ದಿನಗಳಲ್ಲೂ ದೊರೆಯುತ್ತವೆ.



ಕೆಲವು ವ್ಯಾಖ್ಯೆಗಳು

ಡಾ|| ಎಚ್. ಎಂ. ಪಂಚಾಕ್ಷರಯ್ಯ

ಜೀವನ:	ನಾವು ಹುಟ್ಟಿನಿಂದ ಸಾವಿನವರೆಗೆ ಕಳೆಯುವ ಅವಧಿ. ಮೊದಲ ಅರ್ಧ ನಮ್ಮ ತಂದೆತಾಯಿಗಳು ಕಬಳಿಸುತ್ತಾರೆ. ಉಳಿದ ಅರ್ಧವನ್ನು ನಮ್ಮ ಮಕ್ಕಳು ಮುಗಿಸುತ್ತಾರೆ.
ವಾರ್ತಾಪತ್ರಿಕೆ:	ಒಂದು ಪ್ರಕಟಣೆ. ಅದರ ಮೊದಲ ಪುಟದಲ್ಲಿ ಜೂಜಾಟವನ್ನು ಖಂಡಿಸಿ ಲೇಖನವಿರುತ್ತದೆ. ಅದರ ಆಟದ ವಿಭಾಗದಲ್ಲಿ ಕುದುರೆ ಜೂಜಿನ ಬಗ್ಗೆ ಮಾಹಿತಿ ಇರುತ್ತದೆ.
ಧರ್ಮ:	ಮುಂದಿನ ಲೋಕದಲ್ಲಿ ಇರಬಹುದಾದ ಅಘಾತಕ್ಕೆ ನಾವು ಈ ಜೀವನದಲ್ಲಿ ತೆಗೆದುಕೊಳ್ಳುವ ಇನ್ಸೂರೆನ್ಸ್ ಪಾಲಿಸಿ.
ಟೆಲಿವಿಷನ್ ಸಟ್:	ಒಂದು ಎಲೆಕ್ಟ್ರಾನಿಕ್‌ಯಂತ್ರ ಇದು ಕೆಟ್ಟಾಗ ಸಂಭಾಷಣೆಯನ್ನು ಪ್ರಚೋದಿಸುವುದು.
ಅನುಭವ:	ನಮ್ಮ ತಪ್ಪುಗಳಿಗೆ ಕೊಡುವ ಒಂದು ಹೆಸರು
ಜೂಜಾಟ:	ನಿಶ್ಚಿತೆಯನ್ನು ಅನಿಶ್ಚಿತೆಯನ್ನಾಗಿ ಮಾಡುವ ಒಂದು ಆಟ
ವಿಮರ್ಶಕ:	ಓಡುವುದನ್ನು ಕಲಿಸುವ ಒಬ್ಬ ಕಾಲಿಲ್ಲದ ಮನುಷ್ಯ
ಪುಸ್ತಕಗಳು:	ಎಲ್ಲರೂ ದೂರದಿಂದ ಮೆಚ್ಚುವಂತಹ ವಸ್ತು.



ಹಾಸ್ಯಬ್ರಹ್ಮ

(ನಗೆಬರಹಗಾರರ ಸಂಘಟನೆ)

1994 ರಲ್ಲಿ ಅಪರಂಜಿ ದಶಮಾನೋತ್ಸವ

1995 ರಲ್ಲಿ ಹಾಸ್ಯೋತ್ಸವ -95

ಇದೀಗ 25.12.1996 ರಂದು

ನಾ. ಕಸ್ತೂರಿ ಅವರ ಜನ್ಮಶತಾಬ್ಧಿ ಮತ್ತು ಹಾಸ್ಯೋತ್ಸವ-96

ಅಂದು ದಿನವಿಡೀ ನಮ್ಮೊಂದಿಗೆ ನಕ್ಕುನಲಿಯುವ ನಿಮಗೆ ಒಂದು ಸದವಕಾಶ.

ಸ್ಥಳ: ಡಾ॥ ಹೆಚ್. ಎನ್. ಕಲಾಕ್ಷೇತ್ರ, ಜಯನಗರ, ಬೆಂಗಳೂರು

ಭಾಗವಹಿಸುವವರು ಕನ್ನಡದ ಹೆಸರಾಂತ ನಗೆ ಚೆಲ್ಲಿಗರು, ಹಾಸ್ಯನಾಟಕ ವಿಶಾರದರು ಮತ್ತು ಭೈರಿಗರು; ನಗೆ ಪುಸ್ತಕ ಪ್ರದರ್ಶನ ಮಾರಾಟ, ವ್ಯಂಗ್ಯಚಿತ್ರ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳು.
25.12.1996 ರಂದು ಬೇರೇನೂ ಕೆಲಸವಿಟ್ಟುಕೊಳ್ಳಬೇಡಿ. ಇಡೀದಿನ ನಿಮ್ಮ ಕಷ್ಟಕೋಟಲೆ ಮರೆತು ಹಾಯಾಗಿರಲು ಬಿಡುವು ಮಾಡಿಕೊಳ್ಳಿ.

ವಿಶೇಷ ಆಕರ್ಷಣೆ:

ಬಿಡುಗಡೆಯಾಗುವ ಪುಸ್ತಕಗಳ ಬಗೆಗೆ ಯಾರೂ ಕೊರೆಯುವುದಿಲ್ಲ.

ಮೊದಲ ಪಯಣ

ಶಿವು

''ಸೈಕಾಲಜಿ, ಹ್ಯೂಮನ್ ಡೆವೆಲಪ್‌ಮೆಂಟ್ ಎರಡೂನೂ ಸುಮಾರಾಗಿ ಇಂಟರ್‌ಪರ್ಸನಲ್ ಸಂಬಂಧಗಳ ಬಗ್ಗೇನೇ ಡೀಲ್ ಮಾಡುತ್ತೆ ಅಲ್ವೇ?'' ನಾನು ಸ್ವಾತಿಯನ್ನು ಕೇಳಿದೆ.

''ಹೌದು ಅಂಕಲ್. ಹೋಮ್‌ಸಯನ್ಸ್ ವಿದ್ಯಾರ್ಥಿಗಳಿಗೆ ಇವೆರಡೂ ಅತ್ಯಂತ ಉಪಯುಕ್ತ'' ಸ್ವಾತಿ ಉತ್ತರಿಸಿದಳು.

''ಉಪಯುಕ್ತ ಎಂದರೆ ಹೇಗೆ? ಮದುವೆ ಆದಮೇಲೆ ಅತ್ತೆ ಜೊತೆ ಸೊಸೇರು ತಮ್ಮ ರಿಲೇಷನ್‌ಷಿಪ್‌ನ ಇಂಪ್ರೂವ್ ಮಾಡ್ಕೋಬೋದು ಅಂತಲೇ?''

''ಇಂಪ್ರೂವ್ ಆಗುತ್ತೋ ಇಲ್ವೋ ಗೊತ್ತಿಲ್ಲ ಅಂಕಲ್. ಆದ್ರೆ ಜಗಳ ಯಾಕೆ ಆಡ್ದೆ ಅಂತ ಗಂಡ ಕೇಳಿದ್ರೆ, ಸೈಂಟಿಫಿಕ್ ಆಗಿ ರೀಸನ್ ಕೊಡುಕ್ಕೆ ಈ ವಿಷಯಗಳೆಲ್ಲಾ ಉಪಯೋಗಕ್ಕೆ ಬರಬಹುದು'' ಅಂದಳು ಸ್ವಾತಿ. ಮುಖ ಗಂಭೀರವಾಗಿದ್ದರೂ ಕಣ್ಣಂಚಿನಲ್ಲಿ ನಗೆ ಮಿನುಗುತ್ತಿತ್ತು. ಅರೆ, ತುಂಟಹುಡುಗಿ ಅಂದುಕೊಂಡೆ.

ನಾವೆಲ್ಲಾ ಹರಟುತ್ತಾ ಕುಳಿತಿದ್ದ ಜಾಗ ಕೆ.ಜಿ.ಎಫ್.ನ ಚಿನ್ನದ ಗಣಿಗಳ ಅತಿಥಿಗೃಹ. ದಸರೆಯ ರಜ ಕಳೆಯಲು ನಾನು, ಕೆ.ಟಿ. ಅಲ್ಲಿಗೆ ಹೋಗಿದ್ದೆವು. ಕ್ಯಾಸಂಬಳ್ಳಿಯ ವೆಂಕಟಕೃಷ್ಣ, ಬೆಮೆಲ್‌ನ ಎಂ.ಎನ್.ಕೆ. ನಮ್ಮ ಆತಿಥ್ಯದ ಹೊಣೆ ಹೊತ್ತಿದ್ದರು. ಚೈನೀಸ್ ಅಡುಗೆಗಳ ವೈವಿಧ್ಯತೆಯ ಬಗ್ಗೆ ಹೆಂಗಸರಲ್ಲಿ ಬಿಸಿ ಬಿಸಿ ಚರ್ಚೆ ನಡೆದಿತ್ತು. ಕೆ.ಟಿ. ಮತ್ತು ವೆಂಕಟ್ ಚಿಪ್ಪಿಂಗ್ ಬಗ್ಗೆ ಮಾತುಕತೆಗಳಲ್ಲಿ ತಲ್ಲೀನರಾಗಿದ್ದರು. ಎಂ.ಎನ್.ಕೆ. ತಿಂಡಿ ತೀರ್ಥಗಳ ಸರಬರಾಜಿನಲ್ಲಿ ಮಗ್ನನಾಗಿದ್ದ. ಹಾಗಾಗಿ ನನ್ನೊಂದಿಗೆ ಮಾತಿಗೆ ಸಿಕ್ಕಿಕೊಂಡಿದ್ದು ವೆಂಕಟ್ ಮಗಳು ಸ್ವಾತಿ. ಸ್ವಾತಿ ಹೋಮ್‌ಸಯನ್ಸ್ ವಿದ್ಯಾರ್ಥಿನಿ. ಮೇಲೆ ತಿಳಿಸಿದ ಎರಡು ವಿಷಯಗಳ ಜೊತೆಗೆ ಎಕ್ಸ್‌ಟೆನ್‌ಷನ್ ಎಜುಕೇಷನ್ ಎಂಬ ವಿಷಯವನ್ನೂ ಅವಳು ಅಭ್ಯಾಸ ಮಾಡುತ್ತಿದ್ದಳೆಂದು ತಿಳಿಯಿತು.

''ಹಾಗೆಂದರೇನು?'' ನಾನು ಕೇಳಿದೆ

''ಬೆಂಗಳೂರಿನ ಸುತ್ತಮುತ್ತ ಇರೋ ಸ್ಲಂ ಗಳಿಗೆ ಹೋಗಿ, ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಆರೋಗ್ಯದ ಬಗ್ಗೆ ಪಾಠ ಹೇಳೋದು ಅಂಕಲ್. ಕಳೆದ ಬಾರಿ ನಾವೆಲ್ಲಾ ಸಿಟಿರೇಲ್ವೇ ಸ್ಟೇಷನ್ ಬಳಿ ಇರೋ ಸ್ಲಂಗೆ ಹೋಗಿದ್ವಿ. ಕಷ್ಟಪಟ್ಟು ಕನ್ನಡದಲ್ಲಿ ಅರ್ಧ ಘಂಟೆ ಪಾಠ ಹೇಳಿದೆ. ಹೆಂಗಸರೆಲ್ಲಾ ಅತ್ಯಂತ ಆಸಕ್ತಿಯಿಂದ ತಲೆದೂಗುತ್ತಾ ಪಾಠ ಕೇಳಿಸಿಕೊಂಡಂತಿತ್ತು. ಪಾಠ ಮುಗಿಸಿ ನಾನು ಹಿಂದಕ್ಕೆ ಬರುತ್ತಿದ್ದಾಗ ನನ್ನ ಹಿಂದೆ ಒಬ್ಬ ಹೆಂಗಸು ಇನ್ನೊಬ್ಬಳನ್ನು ಕುರಿತು ''ಆ ಬಿಡ್ಡ ಏಮಿ ಚಪ್ರಿ?'' ಅಂತ ಕೇಳಿದ್ಲು ಅವಳು'' ನಾಕೇಮ್ ತೆಲ್ಸು, ಏಮೋ ಚೆಪ್ರಿ'' ಅಂತ ಹೇಳಿ ಹೋದಳು ಅಂಕಲ್'' ಎಂದಳು ಸ್ವಾತಿ.

ಅಷ್ಟು ಹೊತ್ತಿಗೆ ಎಂ.ಎಸ್.ಕೆ. ತನ್ನ ಸರಬರಾಜು ಕಾರ್ಯಮುಗಿಸಿ ನನ್ನ ಬಳಿ ಒಂದು ಕುಳಿತ ಎಂ.ಎಸ್.ಕೆ. ವೃತ್ತಿಯಲ್ಲಿ ಇಂಜಿನಿಯರ್. ಒಳ್ಳೇ ಕ್ರೀಡಾಪಟು. ಚಿಕ್ಕಂದಿನಿಂದ ಬ್ಯಾಸ್ಕಟ್ ಬಾಲ್, ಕ್ರಿಕೆಟ್ ಆಡಿ ಅನೇಕ ಪಾರಿತೋಷಕ, ಬಹುಮಾನಗಳನ್ನು ಗಳಿಸಿದ್ದ. ಇತ್ತೀಚಿಗೆ ಗಾಲ್ಫ್‌ನಲ್ಲೂ ಒಟ್ಟಿಗೆ ಏಳೆಂಟು ಛಾಂಪಿಯನ್ ಷಿಪ್ ಗೆದ್ದು ಅನೇಕರ ಹಾರ್ದಿಕ ಅಸೂಯೆಗೆ ಪಾತ್ರನಾಗಿದ್ದ. ಅವನ ಕೈಯಲ್ಲಿ ಗಾಲ್ಫ್ ದಂಡ, ಮ್ಯಾಜಿಕ್‌ವ್ಯಾಂಡ್‌ನಂತೆ ನರ್ತಿಸುವುದನ್ನು ಆ ದಿನ ಬೆಳಗ್ಗೆ ನಾನೇ ಕಣ್ಣಾರೆ ಕಂಡಿದ್ದೆ. ಮಾತುಕತೆ ಚಿನ್ನದ ಗಣಿಗಳ ಆಗುಹೋಗುಗಳ ಕಡೆ ತಿರುಗಿತು.

''ಚಿನ್ನದ ಗಣಿಗಳ ಕೆಲಸ ಹೇಗೆ ನಡೀತಿದೆ ಎಂ.ಎಸ್.ಕೆ.? ತುಂಬಾ ಲಾಸ್ ಆಗ್ತಾ ಇದೆ ಅಂತಾ ಹೇಳ್ತಾರಲ್ಲಾ ಏನು ವಿಷಯ?'' ನನ್ನ ಕುತೂಹಲ ಸಹಜವಾಗಿತ್ತು.

''It is obvious ಶಿವು. ಗಣೀಲಿರೋ ಯಂತ್ರಗಳೆಲ್ಲಾ ಓಬೀರಾಯನ ಕಾಲದೋವು. ಅವುಗಳಿಂದ ಪ್ರೊಡಕ್ಟಿವಿಟಿ ಏನು ಬರುತ್ತೆ. ಹೊಸಾ ಮೆಷೀನೆರಿ ಕೊಳ್ಳೋದಕ್ಕೆ ದುಡ್ಡಿಲ್ಲ. ಇರೋ ಅದಕ್ಷ ಕೆಲಸಗಾರರನ್ನು ತೆಗೆಯೋಹಾಗಿಲ್ಲ ಇನ್ನೇನಾಗುತ್ತೆ'' ಅಂತ ಎಂ.ಎಸ್.ಕೆ.

''ಟಾಪ್ ಮ್ಯಾನೇಜ್‌ಮೆಂಟ್‌ನೋರು ಪರಿಸ್ಥಿತಿನ ಇಂಪ್ರೂವ್ ಮಾಡೋಕ್ಕೆ ಏನೂ ಪರಿಹಾರ ಕಂಡು ಹಿಡಿದಿಲ್ವೇ?''

''ಕಂಡು ಹಿಡೀದೇ ಏನು, ಆದರೆ ಅದು ಸೆಲ್ಫ್ ಇಂಪ್ರೂವ್‌ಮೆಂಟ್ ಅಷ್ಟೆ. ಹಲವು ವರ್ಷಗಳ ಹಿಂದೆ ಇಲ್ಲೊಬ್ಬ ಅಧಿಕಾರಿ ಇದ್ದ. ಚಿನ್ನದ ಅದಿರನ್ನ ಒಂದು ಕ್ರುಸಿಬಲ್ಲಿನಲ್ಲಿ ಹಾಕಿ ಕರಗಿಸಿ, ಅದನ್ನ ಎರಕ ಹೊಯ್ದು ಚಿನ್ನದ ಬಿಸ್ಕೆಟ್‌ಗಳನ್ನು ತಯಾರಿಸೋದು ಅವನ ಕೆಲಸ. ದಿನ ನಿತ್ಯ ಈ ಕೆಲಸ ಮಾಡ್ತಾ ಇದ್ದಾಗ ಈತ ಯಾವಾಗಲೂ ಸೆಲ್ಫ್ ಇಂಪ್ರೂವ್‌ಮೆಂಟ್ ಬಗ್ಗೆ ಯೋಚಿಸ್ತಾ ಇದ್ದ. ಒಮ್ಮೆ ಅವನಿಗೆ ಷಾಪ್ ಫ್ಲೋರ್‌ನಲ್ಲೇ ಲಕ್ಷ್ಮಿ ಪ್ರತ್ಯಕ್ಷ ಆದಳು''

''ಷಾಪ್ ಫ್ಲೋರಿನಲ್ಲಿ ಲಕ್ಷ್ಮಿನೇ? ಅದು ಹೇಗೆ?''

''ಹೌದು ಶಿವು ಒಂದು ದಿನ ಕ್ರುಸಿಬಲ್ಲಿನಿಂದ ಕರಗಿಸಿದ ಚಿನ್ನ ಬಗ್ಗಿಸ್ತಾ ಇದ್ದಾಗ, ಕ್ರುಸಿಬಲ್ಲಿನ ತಳದಲ್ಲಿ ಒಂದು ತೂತಾಗಿದ್ದು ಇವನ ಕಣ್ಣಿಗೆ ಬಿತ್ತು. ಆ ಅಧಿಕಾರಿ ಅದನ್ನು ನೋಡಿದ ಕೂಡಲೇ ಒಂದು ಸಿಂಪಲ್ ನಿರ್ಧಾರ ತಗೊಂಡ''

''ಏನಂತ?''

''ಆ ತೂತನ್ನು ಎಂದೆಂದಿಗೂ ಮುಚ್ಚಬಾರದು ಅಂತ. ಸೋರಿದ ಚಿನ್ನ ಎಲ್ಲಾ ಇವನ ಪಾಲಿಗೇ. ನಾಲ್ಕು ವರ್ಷಗಳು ಕಳೆದವು. ಮಂಗಳೂರಿನಲ್ಲಿ ಮೂರು ಹೋಟೆಲು, ಉಡುಪಿಯಲ್ಲಿ ನಾಲ್ಕು ಮನೆ ನೂರಾರು ಎಕರೆ ತೋಟಗಳ ತರುವಾಯ ಅವನು ಉದಾರ ಮನಸ್ಸಿನಿಂದ ವಾಲಂಟರಿ ರಿಟೈರ್‌ಮೆಂಟ್ ತಗೊಂಡ. ಈಗ ಆ ತೂತನ್ನು ಮುಚ್ಚಿದಾರೆ ಅನ್ನು''

''ಒಟ್ಟಿನಲ್ಲಿ ಅಜ್ಜಿ ನೂತದ್ದೆಲ್ಲಾ ಅಜ್ಜನ ಉಡಿದಾರಕ್ಕೇ ಅನ್ನೋಹಾಗಿದೆ ಅನ್ನು ಗಣಿ

ವ್ಯವಹಾರ''

''ಖಂಡಿತ ಈ ಚಿನ್ನದ ಉಡಿದಾರದ ಗಲಾಟೇಲಿ, ಕೋಪೀನಕ್ಕೂ ದುಡ್ಡಿಲ್ಲದ ಹಾಗಾಗಿದೆ'' ಅಂತ ಎಂ.ಎನ್.ಕೆ. ಹೇಳುತ್ತಿದ್ದಂತೆ ವೆಂಕಟ್ ನಮ್ಮನ್ನೆಲ್ಲಾ ಊಟಕ್ಕೆ ಕರೆದ.

ಕೆ.ಜಿ.ಎಫ್.ಗೆ ಭೇಟಿ ನನಗೇನೂ ಹೊಸದಲ್ಲ. ಹಿಂದೊಮ್ಮೆ ಬೆಮಲ್‌ಗ ಯಂತ್ರ ಸಾಮಗ್ರಿ, ಸರಬರಾಜು ಮಾಡಿ, ಬಿಲ್‌ಗೋಸ್ಕರ ಇಲ್ಲಿಗೆ ಹತ್ತಾರು ಬಾರಿ ಪರದಾಡಿದ್ದೇನೆ. ಆದಿನಗಳಲ್ಲಿ ಯಾವಾಗ ಬಂದರೂ, ಬಿಸಿಲು, ಸೆಖೆ, ಕೆಂಪುಮಣ್ಣಿನ ಧೂಳು ಇವನ್ನೆ ಕಂಡಿದ್ದ ನನಗೆ, ಈ ಬಾರಿ ಅತ್ಯಂತ ಹರ್ಷದಾಯಕ ಆಶ್ಚರ್ಯವೊಂದು ಕಾದಿತ್ತು. ವರುಣದೇವರ ಕೃಪೆಯಿಂದ ಕೋಲಾರ ಜಿಲ್ಲೆಯ ಎಲ್ಲ ಕೆರೆ ಕಟ್ಟೆಗಳೂ ಪೂರ್ತಿ ತುಂಬಿ, ಕೋಡಿ ಹರಿಯುವುದರಲ್ಲಿದ್ದವು. ಕೆರೆಯ ಬದಿಯ ಗದ್ದೆಗಳಲ್ಲಿ ಬೆಳೆದು ನಿಂತ ಹೊಳೆಯುವ ಹಸಿರು ಪಯಿರು, ರೆಕ್ಕೆಗಳನ್ನು ಬೀಸಿ, ಸೌಂದರ್ಯೋಪಾಸನೆಗೆ ನಮ್ಮನ್ನು ಆಹ್ವಾನಿಸುತ್ತಿದ್ದ ದೂರದ ತೆಂಗಿನ ಮರಗಳು ಇದನ್ನೆಲ್ಲಾ ನೋಡುತ್ತದ್ದಂತೆ ಇದೇನು ಕೋಲಾರವೋ, ದಕ್ಷಿಣಕನ್ನಡ ಜಿಲ್ಲೆಯೋ ಎಂಬ ಸಂದೇಹ ಉಂಟಾಗುವಷ್ಟು ಮನೋಹರವಗಿತ್ತು ನಾವು ಕಂಡ ದೃಶ್ಯ.

ಮೂರನೇಯ ಬೆಳಿಗ್ಗೆ ನಾವೆಲ್ಲಾ ಕ್ಯಾಸಂಬಳ್ಳಿಗೆ ಹೊರಟವು. ಅದು ವೆಂಕಟಕೃಷ್ಣನ ಊರು. ಅಲ್ಲಿ ಅವನ ಪೂರ್ವಜರು ಕಟ್ಟಿಸಿದ್ದ ನೂರು ವರ್ಷಕ್ಕೂ ಹಳೆಯದಾದ ಪುರಾತನ ಮನೆ ನಮಗೆ ಪ್ರಮುಖ ಆಕರ್ಷಣೆ. ಊರಿಗೆ ಇನ್ನೂ ಸ್ವಲ್ಪ ದೂರ ಇರುವಾಗಲೇ ವೆಂಕಟ್ ಮತ್ತು ಸ್ವಾತಿ, ರಸ್ತೆ ಬದಿಯಲ್ಲಿ ನಮಗಾಗಿ ಕಾಯುತ್ತಾ ನಿಂತಿದ್ದರು.

''ಇಲ್ಲಿನ ದೊಡ್ಡಕೆರೆ ಕೋಡಿ ಹರೀತಾ ಇದೆ. ನೋಡಿಕೊಂಡು ಹೋಗೋಣ ಎಲ್ಲಾ ಇಳೀರಿ'' ಎನ್ನುತ್ತಾ ವೆಂಕಟ್ ನಮಗೆ ಮಾರ್ಗದರ್ಶನ ಮಾಡುತ್ತಾ ನಡೆದ. ನಾವು ನಡೆಯಿತ್ತಿದ್ದ ಹಾದಿಯ ಬಲ ಭಾಗದಲ್ಲಿ ಒಂದು ಬಂಡೆಗಲ್ಲಿನ ಗುಡ್ಡ. ಅದರ ಸುತ್ತಲಿಂದ ಜಾಗವಿದ್ದ ಎಲ್ಲ ಹಳ್ಳ ಕೊರಕಲುಗಳಿಂದ ನೀರು ಜುಳುಜುಳನೆ ಹರಿದು ಬರುತ್ತಿತ್ತು. ವೆಂಕಟ್ ಬರಿಗಾಲಿನಲ್ಲಿ ಮೋಸೆಸ್‌ನಂತೆ ಸರಸರನೆ ಹರಿಯುತ್ತಿದ್ದ ನೀರಿನಲ್ಲೇ ನಡೆದುಹೋಗಿ ಆಚೆ ಬದಿಯ ಬಂಡೆ ಸೇರಿದ. ನಾನು ಬಲಗಾಲನ್ನು ನೀರಿನಲ್ಲಿಟ್ಟು, ಎಡಗಾಲನ್ನು ಮೇಲೆತ್ತಿದೆ. ಹರಿಯುವ ನೀರು ಮೇಲೆತ್ತಿದ ಕಾಲನ್ನು ಪಕ್ಕಕ್ಕೆ ತಳ್ಳಿತು. ಬೇಗನೆ ಕಾಲನ್ನು ನೆಲಕ್ಕೂರಿದೆ.

''ಕಾಲು ಜಾರಿಸಿಕೊಂಡು ನಡೀರಿ, ಪಾದ ಮೇಲೆತ್ತಬೇಡಿ'' ಅಂತ ವೆಂಕಟ್ ಎಚ್ಚರಿಕೆ ನೀಡಿದ. ಹರಿಯುತ್ತಿದ್ದ ನೀರನ್ನು ದಾಟಿ, ಬಂಡೆಗಲ್ಲಿನ ಗುಡ್ಡವನ್ನು ಹತ್ತಿ ಆಚೆ ಬದಿಯ ಕೋಡಿಯನ್ನು ಸೇರುವುದು ನಮ್ಮ ಗುರಿ. ಸ್ವಾತಿ, ರಶ್ಮಿ, ಕಿರಣ ಇವರೆಲ್ಲಾ ಯೌವನದ ಉತ್ಸಾಹದಿಂದ ಚಿಗರೆಗಳಂತೆ ಜಿಗಿದು, ಆಚೆ ಬದಿಯ ಬಂಡೆಗಲ್ಲು ಸೇರಿದರು. ನಾವೆಲ್ಲಾ ಸಾಕ್ಸ್, ಸೀರೆ, ಪ್ಯಾಂಟ್, ಇವುಗಳನ್ನೆಲ್ಲಾ ಕ್ರಮವಾಗಿ ಒದ್ದೆ ಮಾಡಿಕೊಂಡು ಇದೂ ಒಂದು ಮಜ ಅಂತ ನಮಗೆ ನಾವೇ ಹೇಳಿಕೊಂಡು, ಮಕ್ಕಳನ್ನು ಹಿಂಬಾಲಿಸಿದೆವು. ಬಂಡೆಗಲ್ಲಿನ ಗುಡ್ಡದ ನೆತ್ತಿಯನ್ನು ತಲುಪಿದ ಕೂಡಲೇ, ಒಮ್ಮೆಲೇ ಕರೆಯ ಹರಹು

ಕಣ್ಣಿಗೆ ಬಿತ್ತು. ನೂರಾರು ಎಕರೆಗಳಷ್ಟು ಚಾಚಿದ್ದ ಕೆರೆ. ಒಂದು ಬದಿಯಲ್ಲಿ ಕೋಡಿ ಅವರ ಮೆಲೆ ಬಟ್ಟೆ ಹರವಿದಂತೆ ನೀರಿನ ಹರಿದಾಟ. ಕೋಡಿಯ ಮೆಲೆ ಬರಿಗಾಲಿನಲ್ಲಿ ನಡೆಯುತ್ತ, ಪಾದಗಳ ಮೇಲೆ ರಭಸದಿಂದ ಹರಿಯುತ್ತಿದ್ದ ನೀರಿನ ತಣ್ಣನ್ನು ಅನುಭವಿಸುವುದು ನಿಜಕ್ಕೂ ಒಂದು ಅಪೂರ್ವ ಅನುಭವ. ನಾವೆಲ್ಲಾ ಕೋಡಿಯಮೇಲೆ ಸಾಲುಗಟ್ಟಿನಿಂತು, ಇಂತಹ ದೃಶ್ಯವನ್ನು ಒದಗಿಸಿದ ಪ್ರಕೃತಿಗೆ ನಮಿಸಿ ಹಿಂದೆ ಬಂದೆವು.

ಹಿಂದಿರುಗಿ ಬರುತ್ತಿದ್ದಾಗ ಹೆಣ್ಣು ಮಕ್ಕಳೆಲ್ಲಾ ಒಗಟುಗಳನ್ನು ಬಿಡಿಸುವ ಆಟ ಆಡುತ್ತಿದ್ದರು.

''Why are flower lazy?" ಎಂದು ರಶ್ಮಿ ಕೇಳಿದರೆ,

""Because they always lie in flower beds" ಎಂದು ಕಿರಣ ಉತ್ತರಿಸುತ್ತಿದ್ದಳು ನಾನು ಅವರನ್ನು ಬಳಸಿ ನಡೆಯುತ್ತಿದ್ದಾಗ, ರಶ್ಮಿ ಒಮ್ಮೆಲೇ

""What has six eyes but cannot see?" ಅಂತ ನನ್ನನ್ನೇ ಕೇಳಿದಳು. ನಾನು ಸುಮ್ಮನಿರಲಾರದೇ

''ಎಲೆಕ್ಷನ್ ಕಮಿಷನ್'' ಅಂದೆ.

''ಥೂ ಹೋಗಿ ಅಂಕಲ್, ಸರಿಯಾದ ಉತ್ತರ ಹೇಳಿ''

ನಾನು ''ಗಿವಪ್'' ಅಂದೆ.

""Three blind mice" ಅನ್ನುವಾಗ ರಶ್ಮಿಯ ದನಿಯಲ್ಲಿ ಗೆಲುವಿನ ಸಂತಸವಿತ್ತು.

ಕ್ಯಾಸಂಬಳ್ಳಿಯಲ್ಲಿ, ನಾವು ವೆಂಕಟ್ ಮನೆ ಸೇರಿದಾಗ ಮಧ್ಯಾಹ್ನ ಮೂರು ಘಂಟೆ. ಭವ್ಯವಾದ ಮನೆ. ಮನೆಯ ಹೊರ ಬಾಗಿಲು ಐದು ಅಡಿ ಎತ್ತರ. ಬಂದವರೆಲ್ಲಾ ಅಹಂಕಾರವಿಲ್ಲದೇ ತಲೆತಗ್ಗಿಸಿ ಮನೆಯೊಳಗೆ ಕಾಲಿಡಬೇಕೆಂದು, ಶಿಲ್ಪಿ ಡಂಕಣಾಚಾರಿಯ ಉದ್ದೇಶ. ಈ ಶಿಲ್ಪಿ ತನ್ನ ಜೀವಮಾನದಲ್ಲಿ ಇದೇ ವಿನ್ಯಾಸದ ನಾಲ್ಕೇ ನಾಲ್ಕು ಮನೆಗಳನ್ನು ಕಟ್ಟಿದ್ದನಂತೆ. ಮನೆಯ ಒಳಗೆ ಹೋಗುತ್ತಲೇ, ಆಕಾಶಕ್ಕೆ ತೆರಪಾದ ವಿಶಾಲವಾದ ಅಂಗಳ. ಸುತ್ತ ಕೊಠಡಿಗಳು. ತೇಗದ ಮರದ ಭಾರಿ ಕಂಭಗಳು, ತೊಲೆಗಳನ್ನು ಎತ್ತಿ ಹಿಡಿದಿದ್ದವು. ವೆಂಕಟ್‌ನ ಚಿಕ್ಕಪ್ಪ ಶ್ರೀ ಕೆ.ಸಿ. ರೆಡ್ಡಿಯವರು ಹುಟ್ಟಿ ಬೆಳೆದ ಮನೆ ಇದು. ಪಂಡಿತ್ ನೆಹರೂ, ಒಮ್ಮೆ ಇವರ ಆತಿಥ್ಯ ಸ್ವೀಕರಿಸಿದ್ದರಂತೆ. ಅವರು ತಂಗಿದ್ದ ಕೊಠಡಿಯನ್ನು ನೋಡಿದ ನಂತರ ನಮ್ಮನ್ನೆಲ್ಲಾ ಊಟಕ್ಕೆ ಎಬ್ಬಿಸಿದರು. ಮುದ್ದೆ, ಬದನೇಪಲ್ಯ, ಚಿಕನ್ ಊಟ, ನಮ್ಮ ಹಸಿದ ಹೊಟ್ಟೆಗಳಿಗೆ ಸ್ವರ್ಗ ಸದೃಶವಾಗಿತ್ತು. ಊಟವಾದ ಬಳಿಕ ವೆಂಕಟ್, ರೈತರು ಈ ದಿನಗಳಲ್ಲಿ ಇದಿರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸತೊಡಗಿದ.

''ಈಗ ಹಳ್ಳಿಗಳಲ್ಲಿ ಬೇಸಾಯ ಮಾಡಲು ಮುಖ್ಯ ತೊಂದರೆಯೆಂದರೆ, ಕೂಲಿಯಾಳುಗಳ ಅಭಾವ. ಪಟ್ಟಣದಲ್ಲಿ ಒಂದು ವಾರದಲ್ಲಿ ಒಂದು ಟ್ರೆಂಚ್ ಅಗೆದರೆ, ಪೀಸ್‌ರೇಟ್‌ನಲ್ಲಿ ಸಾವಿರ ರೂಪಾಯಿಸಿಗುತ್ತೆ, ಆ ರೀತಿ ಕೂಲಿ ಕೊಟ್ಟು ನಾವು ಬೆಳೆ ತೆಗೆದು ಮಾರಾಟ ಮಾಡೋದು ಕನಸಿನ ಮಾತು. ಅದಕ್ಕೇ ನಾನು ಹಣ್ಣಿನ ಗಿಡಗಳನ್ನು ನೆಟ್ಟು ತೋಟಗಾರಿಕೆಗೆ

ಇಳಿದಿದ್ದೇನೆ. ಬೇರೆ ಬೆಳೆಗಳಷ್ಟು ಇದು ಲೇಬರ್ ಇಂಟೆನ್‌ಸಿವ್ ಅಲ್ಲವಲ್ಲಾ'' ಅಂದ ವೆಂಕಟ್.

ಆ ಸಂಜೆ ಆ ಪ್ರಾಂತ್ಯದ ಎಂ.ಎಲ್.ಎ. ಅವರನ್ನು ನಾವುಗಳು ಭೇಟಿಮಾಡುವ ಅವಕಾಶ ದೊರಕಿತ್ತು. ಎಂ.ಎಲ್.ಎ. ಮಧ್ಯಮ ಎತ್ತರದ ವ್ಯಕ್ತಿ. ಜನತಾದಳದ ಶಾಸಕ. ರಾಜಕಾರಣಿಗೆ ಸಹಜವಾದ ದರ್ಪ. ಸಫಾರಿಧರಿಸಿ, ಅದರ ಮೇಲೊಂದು ಬಿಳೀ ಶಾಲು ಹೊದ್ದಿದ್ದರು. ಅವರು ನಮ್ಮೊಡನೆ ಕುಳಿತೊಡನೆಯೇ ಅವರ ಮುಂದೆ, ದೇವರ ಮುಂದಿನ ನೈವೇದ್ಯದ ತಟ್ಟೆಯಂತೆ ಒಂದು ದೊಡ್ಡ ತಟ್ಟೆಯ ತುಂಬಾ ಚಿಕನ್, ಅದರ ಜೊತೆಗೆ ಒಂದು ಗ್ಲಾಸ್ ಗುಂಡು ಪ್ರತ್ಯಕ್ಷವಾಯಿತು. ಅವರೊಡನೆ ಅದೂ ಇದು ಮಾತನಾಡಿ, ಕೊನೆಗೆ ಚಿನ್ನದ ಗಣಿಗಳ ವಿಷಯಕ್ಕೆ ಬಂದೆವು. ''ಈ ಚಿನ್ನದ ಗಣಿಗಳು ತುಂಬಾ ಲಾಸ್‌ನಲ್ಲಿದೆ ಅನ್ನುತ್ತಾರಲ್ಲಾ, ಅದರ ಬಗ್ಗೆ ನಿಮ್ಮ ಅನಿಸಿಕೆ ಏನು?'' ಅಂತ ನಾನು ಕೇಳಿದೆ.

''ಈ ಬಗ್ಗೆ ನಾನು ಈಗಾಗಲೇ ದೇವೇಗೌಡರ ಹತ್ತಿರ ಮಾತನಾಡಿದ್ದೀನಿ. ಖಂಡಿತ ಏನಾದ್ರೂ ಸಹಾಯ ಮಾಡ್ತೀನಿ ಅಂತ ಭರವಸೆ ಕೊಟ್ಟಿದ್ದಾರೆ''

''ಲಾಸ್ ಆಗ್ತಿರೋ ಕಂಪನಿ ಮೇಲೆ ತೆರಿಗೆದಾರರ ಹಣ ಸುರಿದು, ಇನ್ನೂ ಲಾಸ್ ಮಾಡಿಕೊಳ್ಳೋದು ಸರಿಯೇ'' ಅಂತ ಕೇಳಿದೆ.

''ಖಂಡಿತಾ ಸರಿ. ಒಬ್ಬ ಮನುಷ್ಯ ಪ್ರಾಯದಲ್ಲಿ ದುಡಿದಾಗ, ದುಡಿಸಿಕೊಂಡು, ಕೊನೆಗೆ ಅವನು ಮುದುಕನಾದಾಗ, ಅವನನ್ನು ಅನಾಥನನ್ನಾಗಿ ಸಾಯುಕ್ಕೆ ಬಿಡುಕ್ಕಾಗುತ್ತ್ಯೇ? ಅವನ ವೃದ್ಧಾಪ್ಯದಲ್ಲೂ ಅವನನ್ನು ಸಾಕೋದು ನಮ್ಮ ಕರ್ತವ್ಯ ಅಲ್ಲವಾ'' ಅಂತ ನನ್ನೇ ಕೇಳಿದರು ನಾನು ಏನೂ ಹೇಳುಕ್ಕಾಗದೇ ದೇಶಾವಾರದ ನಗೆ ನಕ್ಕುಸುಮ್ಮನಾದೆ.

ತಿಂಡಿ ತೀರ್ಥ ಮುಗಿಯಿತು. ಎಂ.ಎಲ್.ಎ. ಎದ್ದು ಹೋದರು.

ನಾನು ''ಏನು, ಎಂ.ಎನ್.ಕೆ. ನಮ್ಮ ಧುರೀಣರೆಲ್ಲಾ ದೇಶದಲ್ಲಿರೋ ಸತ್ತ ಕುದುರೆಗಳನ್ನು ಹೊಡೆದು ಎಬ್ಬಿಸೋ ಪಣ ತೊಟ್ಟರೆ, ಇದಕ್ಕೆಲ್ಲಾ ಬೇಕಾಗೋ ಅಗಾಧ ಹಣಾನ ಯಾರು ಹೊಂದಿಸ್ತಾರೆ?''

''ಅದಕ್ಕೇನು ಕಷ್ಟ, ಇನ್ನೊಂದಷ್ಟು ಕ್ರುಸಿಬಲ್‌ಗಳಿಗೆ ತೂತು ಹೊಡೆದರಾಯ್ತು'' ಅಂದ ಎಂ.ಎನ್.ಕೆ.

ಕೆ.ಟಿ. ''ಕೃಷ್ಣಾ, ಕೃಷ್ಣಾ'' ಎಂದು ಉದ್ಗರಿಸಿದ.

''ಆ ನಿಮ್ಮ ಕೃಷ್ಣಾನೇ ಮೊಟ್ಟ ಮೊದಲು ಬೆಣ್ಣೆಯ ಮಡಿಕೆಗೆ ತೂತು ಮಾಡಿ ನಮ್ಮ ದೇಶಕ್ಕೆ ಈ ಸೋರಿಕೆ ಸಂಸ್ಕೃತಿ ಒದಗಿಸಿಕೊಟ್ಟಿರೋದು'' ಅಂದ ಎಂ.ಎನ್.ಕೆ.

ಈ ಛಾಂಪಿಯನ್ ಆಟಗಾರರೆಲ್ಲಾ ಬಲೇ ಕಿಲಾಡಿಗಳು ಅಲ್ಲವೇ!



''ಚಿಕ್ಕ ಮಕ್ಕಳು ಹಾಗೆಲ್ಲಾ ಸೌಂದರ್ಯ ಸ್ಪರ್ಧೆಗೆ ಕರಕೊಂಡು ಹೋಗು ಅಂತ
ಹಟ ಹಿಡೀಬಾರ್ದು ಮಗೂ.''

ಕ್ರಿಕೆಟ್ ಸಂದಿಗ್ಧಗಳು

ಯು. ಎಸ್. ರಾವ್

ನವಜ್ಯೋತ್ ಸಿಂಗ್ ಸಿದ್ಧು ಫಕ್ಕನೆ ಇಂಗ್ಲೆಂಡ್ ಪ್ರವಾಸದ ನಡುವೆ ಮರಳಿ ಬಂದು ಉಂಟುಮಾಡಿದ ಸಂದಿಗ್ಧವನ್ನು ಎಲ್ಲಾ ಪತ್ರಿಕೆಗಳೂ ಪುಟತುಂಬ ಬರೆದುವು. ಆದರೆ ಈ ಕ್ರಿಕೆಟ್‌ನಲ್ಲಿ ಸಂದಿಗ್ಧಗಳು ಯಾವಾಗಲೂ ಇಲ್ಲವಾದುದೇ ಇಲ್ಲ. Cricket is a way of life (ಕ್ರಿಕೆಟ್ ಆಟವು ಜೀವನದ ಒಂದು ಮುಖ) ಎನ್ನುತ್ತಾರೆ. ಹಾಗಾಗಿ, ಜೀವನದಲ್ಲಿ ಬಂದ ಹಾಗೆಯೇ, ಬಿಕ್ಕಟ್ಟಿನ ಪ್ರಸಂಗಗಳು ಕ್ರಿಕೆಟ್‌ನಲ್ಲಿ ಬಂದೇ ತೀರಬೇಕು. ಸ್ವಲ್ಪ ಕೇಳಿರಿ:

ಪ್ರಸಂಗ 1

ನಮ್ಮದು, ಆ ಸಾಧಾರಣ ದೊಡ್ಡದೇ ಆದ ಊರಿನಲ್ಲಿ, ಐದಾರು ಬ್ಯಾಂಕ್‌ಗಳ ನೌಕರರನ್ನು ಸೇರಿಸಿಕೊಂಡು ಮಾಡಿದ ಟೀಮು. ಸುತ್ತಮುತ್ತ ನಾಲ್ಕೈದು ಸಣ್ಣ ಊರುಗಳಿಗೆ ಆದಿತ್ಯವಾರಗಳಲ್ಲಿ ನಮ್ಮ ಪ್ರವಾಸ. ಬದಲಾಗಿ, ಅಲ್ಲಿನ ಟೀಮುಗಳು ನಮ್ಮೂರಿಗೆ ಬಂದು ಮರುಪಂದ್ಯ ಆಡುತ್ತಿದ್ದುವು. ಫಲಿತಾಂಶದ ಮೇಲೆ, ಸ್ಕೋರುಗಳ ಮೇಲೆ ಹಣ ಕಟ್ಟುವ ಜೂಜಾಟ ಇತ್ಯಾದಿಗಳಿಂದ ಆಟವು ಆಗ ಇನ್ನೂ ಕಲುಷಿತವಾಗಿರಲಿಲ್ಲ. ಹೊರಗಿನಿಂದ ಬಂದ ಟೀಮಿನವರಿಗೆ, ಊರಿನ ಟೀಮಿನವರು ಮಧ್ಯಾಹ್ನದ ಆತಿಥ್ಯ ಮಾಡಬೇಕೆಂದು ನಿಯಮ. ಮೈದಾನಿನಲ್ಲಿ ಮರಗಳ ಕೆಳಗೆ ಕುಳಿತು ತಿನ್ನಲು ಅನುಕೂಲವಾಗುವಂತಹ ತಿಂಡಿಗಳನ್ನೇ ಹೇಳಿ ಮಾಡಿಸುತ್ತಿದ್ದೆವು. ಉದಾಹರಣೆಗಾಗಿ: ತೈರ್ ವಡೆ, ಸಾಂಬಾರ್‌ಸಾದ (ಸಾಂಬಾರ್ ಕಲಸಿದ ಗಟ್ಟಿ ಅನ್ನ) ಸಮೂಸ ಅಥವಾ ಕಟ್‌ಲೆಟ್, ಜಾಂಗಿರಿಯಂತಹ ಸಿಹಿ. ಬೇಂಕ್ ಟೀಮಿನವರೆಂದು ಖ್ಯಾತಿ ಉಳಿಸಿಕೊಳ್ಳಲು ನಾವು ಅತಿಥಿ ಟೀಮಿನವರಿಗೆ ಇನ್ನೂ ಒಂದು ಐಟೆಮ್ ಸೇರಿಸಿಯೇ ಕೊಡುತ್ತಿದ್ದೆವು. (ಬಟಾಟೆ ಚಿಪ್ಸ್ ಎನ್ನಿ).

ಆ ದಿನ ಸಾಧಾರಣ ಮೂವತ್ತು ಮೈಲು ದೂರದಿಂದ ಒಂದು ಫ್ಯಾಕ್ಟರಿಯವರ ಟೀಮು ಬಂದಿತು. ಟಾಸ್ ಗೆದ್ದು, ಅವರು ಬೆಳಿಗ್ಗೆ ಮೊದಲಿನ ಆಟ ನಡೆಸಿದರು. ನಮ್ಮ ಟೀಮಿನವರಿಗೆ ಉತ್ಸಾಹ ಇದ್ದಷ್ಟು ಪ್ರಾಕ್ಟೀಸ್ ಇಲ್ಲದೆ ಮತ್ತು ಕೂತು ಕೆಲಸ ಮಾಡಿ, ಓಡಲು ಕಾಲು ಬಾರದೆ, ಹನ್ನೆರಡು ಮುಕ್ಕಾಲು ಗಂಟೆಗೆ ಅವರನ್ನು ಆಲ್ ಔಟ್ ಮಾಡಬೇಕಾದರೆ ಹರೋಹರ ಆಯಿತು. ತಮಿಳುನಾಡಿನ ಬಿಸಿಲು ಬೇರೆ. ಬೇಗನೆ ತಿಂಡಿ ಮುಗಿಸಿ, ಮಧ್ಯಾಹ್ನದ ಆಟದಲ್ಲಿ ಆ ಭೂಪತಿಗಳನ್ನು ಅಷ್ಟೇ ದಣಿಸಬೇಕೆಂದು 'ಒಳಗೆ' (ಮರಗಳ ಕೆಳಗೆ) ಬಂದೆವು. ವಾಡಿಕೆಯಂತೆ, ಅವರ ಗುಂಪು ಬೇರೆ, ನಾವು ಬೇರೆಯಾಗಿ ತಿಂಡಿ ತಿನ್ನುತ್ತ, ಬೆಳಗ್ಗಿನ ಆಟದ ವಿಷಯ ಚರ್ಚಿಸುತ್ತ, ಪೆಟ್ಟುಬಿದ್ದಕಡೆ, ಮಂಡಿ ತರೆದ ಕಡೆ, ಮುಲಾಮು ಸವರುತ್ತ, ಗಂಟೆ ಒಂದೂವರೆ ಕಳೆಯಿತು. ನಮ್ಮ

ಪ್ರಾರಂಭದ ಆಟಗಾರರು ಪ್ಯಾಡ್ ಕಟ್ಟಿಕೊಂಡು, ಕೋಟು, ಹ್ಯಾಟ್ ಧರಿಸಿ ಸಜ್ಜಿತರಾದ ಅಂಪೈರುಗಳೊಡನೆ ಹರಟೆ ಹೊಡೆಯುತ್ತಿದ್ದರು. ಆದರೆ, ಎದುರು ಟೀಮಿನವರು ನಾಪತ್ತೆ. ಅವರ ಲಂಚ್ ನಡೆದ ಮರಗಳ ಕೆಳಗೆ ನೋಡಿದರೆ, ಮೂರು ನಾಲ್ಕು ಜನ ಬಿಸಿಲಿಗೆ ಅಪ್ಟಾಗಿದ್ದುದು ತೋರುತ್ತಿಟ್ಟತು. ಹೋಗಿ ಕೇಳಿದರೆ, ''ಉಳಿದವರು ಇಲ್ಲಿಯೇ ಪೇಟೆಗೆ ಸ್ವಲ್ಪ ಖರೀದಿಗೆ ಹೋಗಿದ್ದಾರೆ. ಇನ್ನೇನು - ಈಗ ಬಂದು ಬಿಡುತ್ತಾರೆ'' ಎನ್ನುತ್ತಿದ್ದರು. ಅವರನ್ನು ಶಪಿಸುತ್ತ ಮೂರು ಗಂಟೆ ಹೊಡೆಯಿತು. ಊಹುಂ- ಯಾರೂ ಬರಲೇ ಇಲ್ಲ. ಇದ್ದ ನಾಲ್ವರೂ, ಒಬ್ಬೊಬ್ಬರಾಗಿ ಕರಗಿ ಹೋದರು. ಮ್ಯಾಚು ಗೋವಿಂದ!

ಹಾಗೆ ನೋಡಿದರೆ, ಇಷ್ಟು ದೂರದ ಪೇಟೆಗೆ ಫ್ಯಾಕ್ಟರಿ ಖರ್ಚಿನಲ್ಲಿ ಬಂದು, ನಮ್ಮ ಖಾತೆಯಲ್ಲಿ ಭರ್ಜರಿ ತಿಂಡಿಯಾಯಿತು; ಇನ್ನು ಆ ಮಧ್ಯಾಹ್ನದ ಬಿಸಿಲಿನಲ್ಲಿ ಒಣಗಿ ಫೀಲ್ಡಿಂಗ್ ಮಾಡಿ, ಯಾವುದೋ ಒಂದು ಅನಾಮಧೇಯ ಬ್ಯಾಂಕ್ ಟೀಮನ್ನು ಜಯಿಸಿದರೆ ಏನು ಪುರುಷಾರ್ಥ ಸಾಧಿಸಿದಂತಾಯಿತು? ಬದಲಿಗೆ ಪೇಟೆಯಲ್ಲಿ ಖರೀದಿ ಮುಗಿಸಿ, ನೆಂಟರಿಷ್ಟರನ್ನು ಅವರವರ ಮನೆಗಳಲ್ಲಿ ಭೇಟಿ ಮಾಡಿ ಚಕ್ಕಂದ ಹೊಡೆದು, ಆರು ಗಂಟೆಗೆ ಊರ ಬಸ್ಸು ಹಿಡಿದರೆ, ದಿನ ಸಾರ್ಥಕವಾಯಿತು. ಅದಕ್ಕಿಂತ ಮೇಲೆ, ಪೇಟೆಗಳಲ್ಲಿ ಇದ್ದ ಥಿಯೇಟರುಗಳು ಅವರ ಊರಿನಲ್ಲಿ ಎಲ್ಲಿ ಲಭ್ಯ? ಒಂದು ಹೊಸ ಎಮ್. ಜಿ. ಆರ್. ಪಟ ಮ್ಯಾಟಿನಿ ನೋಡಿದರೆ ಕೈವಲ್ಯಕ್ಕೆ ಕಾಲು- ಮಣೆ. (ಹೆಚ್ಚಿನವರು ಹಾಗೇ ಮಾಡಿದರೆಂದು ಮತ್ತೆ ತಿಳಿಯಿತು)

ಅವರೇನೋ ಕೆಲಸ ಚೊಕ್ಕಟ ಮಾಡಿದರು. ಬೇಂಕಿನವರು ತಾನೇ ಏನು ಮಾಡಿಯಾರು? ತಲೆಯ ಮೇಲೆ ಕೈ ಹೊತ್ತು, ಬಿಸಿಲಿಗೆ ಒಣಗಿದ ಮುಖ ಕೆಳಗೆ ಹಾಕಿ, ವ್ಯಥಾ ಖರ್ಚಾದ ತಿಂಡಿಯ ಲೆಕ್ಕ ಹಾಕುತ್ತಾ ಮನೆ ಸೇರಿದೆವು.

ಪ್ರಸಂಗ 2

ಇನ್ನೊಂದು ಆದಿತ್ಯವಾರ ನಮ್ಮ ಟೀಮು ಹತ್ತಿರದ ಒಂದು ಊರಿಗೆ ಹೋಗಿತ್ತು. ಒಂದು ದಿನದ ಮ್ಯಾಚು. ಸಣ್ಣ ಊರಾದರೂ, ಒಂದೆರಡು ಫ್ಯಾಕ್ಟರಿಗಳೂ, ನೀರಾವರಿ, ಕೃಷಿ ಇತ್ಯಾದಿ ಇದ್ದು ಸಮೃದ್ಧಿಯ ಜನರು. ಅವರು ಒದಗಿಸಿದ ತಿಂಡಿಯ ಆಧಾರದಿಂದಲೇ ಇದನ್ನು ಹೇಳಬಹುದಿತ್ತು (ಮಟನ್ನು ಬಿರಿಯಾಣಿ ಕೊಡಿಸಿದ್ದರು!).

ಅವರ ಟೀಮಿನಲ್ಲೊಬ್ಬ ವೇಗದ ಬೌಲರ್ (Fast bowler) ಸೊಗಸುಗಾರ - ಉದ್ದಕ್ಕೆ ಕೂದಲು, ಬೆರಳುಗಳಿಗೆ ನಾಲ್ಕು ಚಿನ್ನದ ಉಂಗುರಗಳು, ಬಂಗಾರದ ಮಿರುಗುವ ಚೈನ್- ಬೌಲ್ ಮಾಡಲು ಅವನು ಓಡಿಬರುವ ಸ್ಟೈಲ್ ನೋಡಬೇಕಿತ್ತು ಶ್ರೀನಾಥ ಬಿಡಿ; ಲಿಂಡ್‌ವಾಲ್, ಟ್ರೂಮನ್ ಕೂಡ ನಾಚಬೇಕು. ಅನುಕೂಲಸ್ಥರ ಹುಡುಗನೆಂದು, ಅವನು ಬೌಲ್ ಮಾಡುವಾಗ ಚಪ್ಪಾಳೆ ತಟ್ಟುವ ಹಿಂಡಿನ ಗಾತ್ರದಿಂದ ತಿಳಿಯುವಂತಿತ್ತು.

ಆದರೆ, ನಮ್ಮಲ್ಲಿ ಮೈಸೂರಿನ ಲೀಗ್‌ನಲ್ಲಿ ನುರಿತ ಇಬ್ಬರು ಆಟಗಾರರು ಮೊದಲಾಗಿ (Opening) ಆಡುತ್ತಿದ್ದರು. ಆ ಸೊಗಸುಗಾರನ ಆರಂಭದ ಓವರುಗಳಲ್ಲಿ ಮೂರು, ನಾಲ್ಕು ಬೌಂಡರಿಗಳನ್ನು ಬಡಿದೇ ಬಡಿದರು. ಅವನ ಬೌಲಿಂಗ್ ಅಷ್ಟೊಂದು ಕಳಪೆ

ಎಂದಲ್ಲ. ಆದರೆ, ನಮ್ಮವರ ಲೀಗ್ ಅನುಭವ, ಮ್ಯಾಚ್ ಪ್ರಾಕ್ಟೀಸ್ ಆ ಸಣ್ಣ ಊರಿನ ಹೈದನಿಗೆ ಎಲ್ಲಿಂದ ಬರಬೇಕು? (ಹಾಗೆ ನೋಡಿದರೆ, ನಮ್ಮ ಟೀಮಿನಲ್ಲಿ ಕೂಡಾ ಇಬ್ಬರು ಮೂವರನ್ನು ಬಿಟ್ಟರೆ, ಉಳಿದವರು ಬೇರೆ ಉಪಾಯವಿಲ್ಲದೆ ಸೇರಿಸಲ್ಪಟ್ಟವರು-ದೇವೇಗೌಡರ ಕ್ಯಾಬಿನೆಟ್ಟಿನ ಹಾಗೆ ಎನ್ನಿ ಬೇಕಾದರೆ!)

ಲಂಚ್ ಟೈಮಿನಲ್ಲಿ, ನಾಲ್ಕೈದು ಜನ ಊರಿನ ಗಣ್ಯರು ಬಂದು ನಮ್ಮೊಡನೆ ಮಾತುಕಥೆ ನಡೆಸಿದರು. ''ನೋಡಿ ಸ್ವಾಮಿ-ನೀವು ದೊಡ್ಡ ಊರಿನವರು, ನಾಲ್ಕು ಊರು ನೋಡಿದವರು. ನಮ್ಮ ಹುಡುಗರಾದರೋ ಇಲ್ಲಿಯೇ ದಿನ ಕಳೆಯಬೇಕು. ನೀವು ಓವರಿಗೆ ನಾಲ್ಕು ಹೊಡೆತ ಹಾಕಿ, ನಮ್ಮ ಹುಡುಗ ಈಗ ಮುಖ ತೋರಿಸಲು ನಾಚಿಕೆ ಪಡುತ್ತಾನೆ. ಪಾಪ; ಸಣ್ಣ ವಯಸ್ಸು, ಸ್ವಲ್ಪ ಸುಧಾರಿಸಿಕೊಳ್ಳಿ'' ಎಂದರು.

ನಿಜವೇ! ಅಲ್ಲದೇ ಅವರ ಭರ್ಜರಿ ಆತಿಥ್ಯ ಬೇರೆ. ಮಾತು ಕೂಡ ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ. ಮೈಸೂರು ಲೀಗ್ ಆಟಗಾರರನ್ನು Retired hurt ಮಾಡಿ ಮಧ್ಯಾಹ್ನದ ಆಟ ಮುಂದುವರಿಸಿದೆವೆನ್ನಿ.

ಪ್ರಸಂಗ 3

ಇನ್ನೊಂದು ಮ್ಯಾಚಿನಲ್ಲಿ, ಎದುರು ಟೀಮಿನ ಆಟ ಮುಗಿದು, ನಮ್ಮವರು ಆರಂಭ ಮಾಡಲು ಕಟ್ಟುತ್ತಿದ್ದರು. ಅವರ ಆಟಗಾರರು ಆಗಲೇ ಬಯಲಿಗೆ ಬಂದು, ತಮ್ಮ ತಮ್ಮ ಸ್ಥಾನಗಳಲ್ಲಿ ನಿಂತು, ಕೈಕಾಲು ಸಡಿಲಿಸಿಕೊಳ್ಳುತ್ತಿದ್ದರು. ಕೋಟು, ಹ್ಯಾಟು ಧರಿಸಿದ ಅಂಪೈರುಗಳೂ ಸಿದ್ಧರಾಗಿ ನಮ್ಮ ಆರಂಭದ ಆಟಗಾರರನ್ನು ಎದುರು ನೋಡುತ್ತಿದ್ದರು.

ಆದರೆ ನಮ್ಮ Openers ಇನ್ನೂ ಕಾಣೆ. ನಿಮಿಷಗಳು ಕಳೆಯುತ್ತಾ ಇದ್ದುವು. ಅಂಥಹ ಮ್ಯಾಚುಗಳಲ್ಲಿ, ಊರಿಗೆ ಊರೇ ಆಟ ನೋಡಲು ಜಮಾಯಿಸುತ್ತದೆ. ನಮ್ಮಿಂದ ಏನಾದರೂ ತಡ, ಪ್ರಮಾದ ನಡೆದರೆ ಮರ್ಯಾದೆ ಹೋಗುವ ಪರಿಸ್ಥಿತಿ.

ಏನು ನಡೆದಿದೆ ಎಂದು ನೋಡಲು ನಮ್ಮ ಡೇರೆಗೆ ಓಡಿದೆ. ನೋಡಿದರೆ, Opening ಹೋಗಬೇಕಾದ ಆಟಗಾರರು ಸಂಪು ಹೂಡಿದ್ದರು. ''ನಾನು ಐದು, ಆರು ಡೌನ್ ಹೋಗುತ್ತೇನೆ ಬೇರೆ ಯಾರಾದರೂ Open ಮಾಡಲಿ'' ಎನ್ನುತ್ತಿದ್ದರು. ವಿಚಾರಿಸಿದರೆ, ಎದುರು ಟೀಮಿನ Opening bowler, ಯಾವುದೋ ಒಂದು ಕಾಲದಲ್ಲಿ, ಮದರಾಸು ರಾಂಜಿ ಟ್ರಾಫಿ ಟೀಮಿಗೆ ವೇಗದ ಬೌಲರ್ (Fast Bowler) ಆಗಿ ಆರಿಸಲ್ಪಟ್ಟಿದ್ದನಂತೆ, ಕೊನಗೆ ಮ್ಯಾಚ್ ಟೀಮಿನಲ್ಲಿ ಅವನನ್ನು ಆಡಿಸಿರದಿದ್ದರೂ, Fast Bowler ಆಗಿ ಆರಿಸಲ್ಪಟ್ಟ ಕೀರ್ತಿ ಅವನನ್ನು ಶಾಶ್ವತವಾಗಿ ಆಶ್ರಯಿಸಿತ್ತು. ಆಸಾಮಿ ಕೂಡ ನೋಡಲು ಸಾಕ್ಷಾತ್ ಆದಿಶೇಷನಂತಿದ್ದ! ಕರ್‍ರಗೆ ಬಿಸಿಲಿನಲ್ಲಿ ಮಿರುಗುತ್ತಿದ್ದ! ಯಾರಿಗೆ ತಾನೇ Opening ಆಡಲು ಹೋಗಿ. ಅವನ ಎಸೆತಗಳಿಂದ ಮೂಳೆ ಮುರಿಸಿಕೊಳ್ಳಬೇಕಾಗಿದೆ? (ಆ ಕಾಲದಲ್ಲಿ ಹೆಲ್ಮೆಟ್ಟುಗಳೂ ಇರಲಿಲ್ಲ)

ನನಗೆ ತಲೆ ಕೆಟ್ಟಿತು. ಎಲ್ಲರನ್ನೂ ಗೋಗರೆದೆ. ಪ್ರಯೋಜನವಿಲ್ಲ! ಕೊನೆಗೆ ರಾಮಬಾಣ

ಬಿಟ್ಟೆ. ಒಬ್ಬಿಬ್ಬರ ಕಿವಿಯಲ್ಲಿ ಹೇಳಿದೆ- ''ನೋಡಪ್ಪ- Opening ಹೋಗಿ, ಬೇಕಾದರೆ ಒಂದೇ ಬಾಲಿಗೆ ಔಟಾಗಿ ಮರಳಿಬಿಡು. ಆದರೆ, ಈಗ ಧೈರ್ಯದಿಂದ ಹೋಗಿ, ಟೀಮಿನ ಮರ್ಯಾದೆ ಉಳಿಸು. ನಿನಗೆ ಮೂರು ದಿನ P.C.L (ಪಿ.ಸಿ.ಎಲ್) ಸ್ಯಾಂಕ್ಷನ್ ಮಾಡಿದ್ದೇನೆ'' ಎಂದೆ. (ಆ ದಿನಗಳಲ್ಲಿ, ಒಂದು ದಿನ ಲೀವ್ ಬೇಕಾದರೂ ಒಂಟಿಕಾಲಿನಲ್ಲಿ ತಪಸ್ಸು ಮಾಡಬೇಕಾಗಿದ್ದಿತು. P.C.L. (Permission to Come Late) ಎಂದರೆ, ಲೀವ್ ಖಾತೆಗೆ ಖರ್ಚು ಕೂಡಾ ಬರೆಯದೆ, ಆಸಾಮಿ ಊಟ ಮುಗಿಸಿ, ಒಂದು ನಿದ್ದೆ ಕೂಡ ಬೇಕಾದರೆ ಮಾಡಿ, ಮೂರು, ನಾಲ್ಕು ಗಂಟೆಗೆ ಬ್ಯಾಂಕಿಗೆ ಬಂದು ಮುಖ ತೋರಿಸಿ ಮರಳಿದರೆ, ದಿವಸ ಕೆಲಸ ಮುಗಿಯಿತು. ಇದು ಲೀವ್ ಎಂದು ಪರಿಗಣಿಸಲ್ಪಡುವುದಿಲ್ಲ. ಅವನನ್ನು ಯಾವುದೋ ಹೊರಗಿನ ಅಫೀಸಿಯಲ್ ಕೆಲಸಕ್ಕೆ ಕಳಿಸಲ್ಪಟ್ಟಿದೆ ಎಂದು ಮ್ಯಾನೇಜರ್ ಸರ್ಟಿಫಿಕೇಟು ಬರೆದರೆ ತೀರಿತು)

ಬಾಣ ತಾಗಿತು- ಜೀವ ಕೈಯಲ್ಲಿ ಹಿಡಿಕೊಂಡು ಬೇಕಾದರೆ ಎನ್ನಿರಿ- ನಮ್ಮ ಹುಡುಗರು Opening ಹೇಗೋ ಸುಧಾರಿಸಿದರು. ಕೊನೆಗೆ, ಆದಿಶೇಷನ ಬೌಲಿಂಗ್ ಕೂಡ ಅಷ್ಟೊಂದು ಭಯಾನಕವಾಗಿರಲಿಲ್ಲ ಎನ್ನಬಹುದು. ''ಪಾಪ- ಅವರ ಮುಖ ನೋಡಿ ನನಗೆ ವೇಗವಾಗಿ ಬೌಲ್ ಮಾಡಲು ಕೈ ಬರಲಿಲ್ಲ'' ಎಂದನಂತೆ. ಇರಬಹುದು.



''ಲೋ, ಕುಂಬ್ಳೆ, ನೀನು ಬೌಲ್ ಮಾಡು ಈಗ''

ಮರಕುಂಟೆಯ ಮಹಾನುಭಾವರು

ಕಂಭಂ ಕೃಷ್ಣಮೂರ್ತಿ

ಮಜರಾಯಿ ಇಲಾಖೆಯ ಅಧಿಕಾರಿ ಚಾಮೇಗೌಡರಿಗೆ ಮರಕುಂಟೆಯ ಗಾರೆಮನೆ ಅಳಶಿಂಗ್ರಾಚಾರ್ರು, ಒಂದು ದೊಡ್ಡ ತಲೆ ಶೂಲೆಯಾಗಿದ್ದರು. ಅಳಶಿಂಗ್ರಾಚಾರ್ಯರ ಮುತ್ತಜ್ಜ ಶಾಮಾಚಾರ್ರು, ಮಣ್ಣಿನ ಬೋಕಿ ಹಂಚಿನ ಮನೆಗಳೇ ತುಂಬಿದ್ದ ಮರುಕುಂಟೆಯಲ್ಲಿ ಪ್ರಪ್ರಥಮವಾಗಿ ಗಾರೆಗಚ್ಚಿನ ಮನೆಯನ್ನು ಕಟ್ಟಿಸಿದ ಖ್ಯಾತಿಗೆ ಭಾಜನರಾದವರು. ಇತ್ತೀಚೆಗೆ ಮರಕುಂಟೆಯಲ್ಲಿ ಲಘು ಮಹಡಿ ಕಟ್ಟಡಗಳು ಅಲಲ್ಲಿ ತಲೆ ಎತ್ತುತ್ತಿದ್ದರೂ, ಅಳಶಿಂಗ್ರಾಚಾರ್ಯರ ವಂಶಕ್ಕೆ ಅಂಟಿದ ಗಾರೆ ಮನೆಯವರು ಎಂಬ ಅಂತ್ಯ ಪ್ರತ್ಯಯವನ್ನು ಊರಿನವರು ಮರೆತಿರಲಿಲ್ಲ.

ಮರಕುಂಟೆಯಲ್ಲಿ ಜನರಲ್ ಕ್ಯಾಟಗರಿಗ ಸೇರಿದ ದೇವರೆಂದರೆ ಸೊಳ್ಳೆ ಆಂಜನೇಯಸ್ವಾಮಿ. ಬಲುಹಿಂದೆ ಎಂದರೆ ಸುಮಾರು ನೂರ ಐವತ್ತು, ಇನ್ನೂರು ವರ್ಷಗಳ ಹಿಂದೆ ಮರಕುಂಟೆಯಲ್ಲಿ ಮೊಟ್ಟಮೊದಲಬಾರಿಗೆ ಮಲೇರಿಯ ರೋಗ ಕಾಣಿಸಿಕೊಂಡಾಗ ಶ್ಯಾಮಚಾರ್ಯರ ಜಮೀನಿನಲ್ಲಿ ಭೂಗತನಾಗಿದ್ದ ಆಂಜನೇಸ್ವಾಮಿ, ನೇಗಿಲಿಗೆ ಸಿಕ್ಕಿಬಿದ್ದ. ಮೈತುಂಬ ಮಣ್ಣು ಮೆತ್ತಿಕೊಂಡು ಮಣ್ಣಿನ ಮಗನಾಗಿದ್ದ ಆತನನ್ನು ಮೇಲೆತ್ತಿ, ಒಂದು ಒಪ್ಪಾರದಲ್ಲಿ ಪ್ರತಿಷ್ಠಾಪಿಸಿ, ಶ್ಯಾಮಾಚಾರ್ಯರು ಆತನ ಪೂಜೆ ಪುನಸ್ಕಾರಕ್ಕೆ ಏರ್ಪಾಡು ಮಾಡಿದರು. ಕ್ವಿನೈನ್ ಮಾತ್ರೆಯಿಂದಲೋ ಅಥವಾ ಆಂಜನೇಯ ಸ್ವಾಮಿಯ ಹಟಾತ್ ಆಗಮನದಿಂದಲೋ, ಮಲೇರಿಯ ಮಂಗಮಾಯವಾಗಿ, ಮರಕುಂಟೆಯ ಮಂದಿ, ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಕೃತಜ್ಞತೆಯೆನ್ನುವುದು ಜನರಲ್ಲಿ ಅಂಟುಜಾಡ್ಯವಾಗಿದ್ದ ಆ ಕಾಲದಲ್ಲಿ, ಊರವರೆಲ್ಲಾ ಸೇರಿ, ಚಂದಾಹಾಕಿ ಸ್ವಾಮಿಗೆ ಒಂದು ಗುಡಿ ಕಟ್ಟಿಸಿದರು. ಯಾರೋ ಬೆಳ್ಳಿಯ ಕಣ್ಣು ಮಾಡಿಸಿಕೊಟ್ಟರು, ಇನ್ನೊಬ್ಬರು ಬೆಳ್ಳಿಯ ನಾಮ, ಮತ್ತೊಬ್ಬರು ಬೆಳ್ಳಿಯ ಕೈಕಾಲುಗಳನ್ನು ಕೊಟ್ಟು, ಊರವರು ಕಲ್ಲಿನ ಸ್ವಾಮಿಯನ್ನು ಬೆಳ್ಳಿಯ ಸ್ವಾಮಿಯಾಗಿ ಮಾಡಿದರು. ಅನಾಫಿಲಿಸ್ ಸೊಳ್ಳೆ ಕಡಿದು ಮಲೇರಿಯಲ್ಲಿದ ಮಲಗಿದ ತಮ್ಮನ್ನು ಸೊಳ್ಳೆಯಿಂದ ರಕ್ಷಿಸಿ ಕಾಪಾಡಿದ ಸ್ವಾಮಿಯನ್ನು ''ಸೊಳ್ಳೆ ಆಂಜನೇಯ'' ಎಂದು ಹೆಸರಿಟ್ಟು ಕರೆದು ಪೂಜಿಸಿದರು, ಮರಗುಂಟೆಯ ಮಂದಿ.

ಅಳ ಶಿಂಗ್ರಾಚಾರ್ಯರ ತೀರ್ಥರೂಪರವರು ಬಲು ರಸಿಕರಾಗಿದ್ದವರು. ಅವರು ತಮ್ಮ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ಬಳಿದು, ಕುದುರೆ ಬಾಲಕ್ಕೆ ಕಟ್ಟಿ, ಕುದುರೆಯಂತೆ ತಾವೂ ಸೋತುಕೂತರು, ಆ ವೇಳೆಗೆ ಕಿಕ್ಕಿರಿದ ಭಕ್ತಾದಿಗಳಿಂದ ಕೂಡಿದ ಆಂಜನೇಯ ಸ್ವಾಮಿ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡಿದ್ದ. ಗುಡಿ ಗುಂಡಾರದಲ್ಲಿದ್ದಸ್ವಾಮಿ, ಗರ್ಭಗುಡಿ, ಧ್ವಜಸ್ಥಂಭ, ವಿಶಾಲವಾದ ಪ್ರಕಾರದ ಕಟ್ಟಡದಲ್ಲಿ ವಾಸಮಾಡಲು ಶುರು ಹಚ್ಚಿ. ಅರ್ಚಕರಾಗಿ ನಿಂತ ಅಳಶಿಂಗ್ರಾಚಾರ್ಯರ ತೀರ್ಥರೂಪುಗಳನ್ನೂ ಅವರ ಕುಟುಂಬವನ್ನು

ಘೋಷಿಸುವ ಜವಾಬ್ದಾರಿಯನ್ನು ಅವನೇ ವಹಿಸಿಕೊಂಡ, ಆಂಜನೇಯ ಸ್ವಾಮಿ ದೇವಾಲಯದ ಆದಾಯವನ್ನು ನೋಡಿದ ಮುಜರಾಯಿ ಇಲಾಖೆಯವರು, ಆ ವರ್ಷದಲ್ಲೇ ದೇವಾಲಯವನ್ನು ತಮ್ಮ ಸುಫರ್ದಿಗೆ ತೆಗೆದುಕೊಂಡರು. ದೇವಾಲಯ ಸರ್ಕಾರಿ ಇಲಾಖೆಗೆ ಸೇರಿದ ಮೇಲೆ, ಸಿಬ್ಬಂದಿ ವರ್ಗದ ನೇಮಕ, ಸಂಬಳ ಸಾರಿಗೆ, ಕಾನೂನು, ಕಟ್ಟಳೆಯೆಲ್ಲಾ ಅನುಷ್ಠಾನಕ್ಕೆ ಬಂದಿತು. ದೇವರಿಗೂ ಒಂದು ಟೈಂ ಟೇಬಲ್ ಸಿದ್ಧವಾಯಿತು. ಸಿಬ್ಬಂದಿ ವರ್ಗ ಮಸ್ಟರ್‌ನಲ್ಲಿ ಸಹಿಮಾಡಿ, ನಿಗದಿಪಡಿಸಿದಂತೆ ಆಯಾದಿನದ ಕಾರ್ಯಕ್ರಮಗಳನ್ನು ನಡೆಸಬೇಕಾಗಿ ಬಂತು. ತೀರ್ಥರೂಪುಗಳು ತೀರಿಹೋದ ಮೇಲೆ ಉದರಂಭರಣಕ್ಕೆ ಸೊಳ್ಳೆ ಆಂಜನೇಯಸ್ವಾಮಿಯನ್ನೇ ನಂಬಿಕೊಂಡಿದ್ದ ಅಳಶಿಂಗ್ರಾಚಾರ್ಯರು ತಂದೆಯ ವೃತ್ತಿಯಲ್ಲೇ ಅಂದರೆ ಸರ್ಕಾರಿ ಅರ್ಚಕರಾಗಿಯೇ ಮುಂದುವರೆದರು. ಸರ್ಕಾರಿ ಅವರ ಸೇವೆಯನ್ನು ಬೇಕು ಎನ್ನಲಿಲ್ಲ ಅಥವಾ ಬೇಡ ಎನ್ನಲಿಲ್ಲ. ಸರ್ಕಾರದ ವತಿಯಿಂದ ಯಾವ ಅರ್ಡರೂ ಅವರ ಕೈತಲಿಪಿರಲಿಲ್ಲ.

ಇದುವರೆಗೂ ಪಾಕಶಾಲೆಯಲ್ಲಿ ಸಟ್ಟುಗಪಾಣಿಯಾಗಿ ಸ್ವಾಮಿಗೆ ನೈವೇದ್ಯವನ್ನು ತಯಾರಿಸುತ್ತಿದ್ದ ಶಠಕೋಪೈಂಗಾರ್ಯರಿಗೆ, ಅಳಶಿಂಗ್ರಾಚಾರ್ಯರು ಅರ್ಚಕರಾಗಿರುವುದು ಸಹ್ಯವಾಗಲಿಲ್ಲ. ''ಏನುಸ್ವಾಮಿ, ನೀವು ಸೀನಿಯರ್ ಮೋಸ್ಟು. ಅವನ ಅಪ್ಪನ ಕಾಲದಿಂದ ದೇವಸ್ಥಾನದಲ್ಲಿ ದುಡಿತಿದ್ದೀರಿ ನಿಮಗಿಂತ ಜೂನಿಯರ್ರಾದ ಅಳಶಿಂಗ್ರಾಚಾರಿ ಅರ್ಚಕನಾಗೋಕೆ ಹ್ಯಾಗೆ ಸ್ವಾಮಿ ಬಿಟ್ರಿ. ನೀನು ಹೀಗೆ ಮೂಗುಮ್ಮಾಗಿ ಕೂತ್ರೆ, ಅಳಶಿಂಗ ಛೀಫ್ ಅರ್ಚಕನೂ ಆಗ್ತಾನೆ. ಪ್ರಮೋಶನ್ ತೆಗೊಂಡು ಪೇಷ್ಕಾರನೂ ಆಗ್ತಾನೆ. ಮೊದಲು ಮುಜರಾಯಿ ಇಲಾಖೆಗೆ ನಿಮ್ಮ ತಕರಾರು ಅರ್ಜಿ ಕೊಡಿ'' ಎಂದು ಕಿಡಿಗೇಡಿ ಮಂದಿ ಶಠಕೋಪೈಂಗಾರ್ಯರಿಗೆ ಚಿತಾವನೆ ಮಾಡಿದರು. ಅವರು ತಮ್ಮ ಹಿರಿಯತನವನ್ನು ವಿಶ್ಲೇಷಿಸಿ ಅಹವಾಲನ್ನು ಮುಜರಾಯಿ ಇಲಾಖೆಗೆ ರವಾನಿಸಿ ಕಾದುಕೂತರು, ಶಠಕೋಪೈಂಗಾರ್ಯನ ಅರ್ಜಿ ಚಾಮೇಗೌಡರ ಮೇಜಿಗೆ ಬಂದಾಗ, ಅವರಿಗೆ ಬಲು ಕಿರಿ ಕಿರಿಯಾಯಿತು. ಕೂಡಲೇ ಅವರು ಅಳಶಿಂಗ್ರಚಾರ್ಯರಿಗೆ ಒಂದು ಶೋಕಾಸ್ ನೋಟೀಸನ್ನು ಕೊಟ್ಟು, ಅವರಿಗೆ ಅರ್ಚಕರಾಗಿ ಮುಂದುವರೆಯಲು, ಯಾವ ಸರ್ಕಾರ ಅನುಮತಿ ಕೊಟ್ಟಿತು. ಅವರಿಗೆ ಆ ಯೋಗ್ಯತೆಯಿದೆಯೆ. ಅವರ ಬಯೋಡಾಟ ಏನು. ಇವೇ ಮುಂತಾದ ವಿವರಗಳನ್ನು ತಕ್ಕ ದಾಖಲೆಗಳೊಂದಿಗೆ ಒಂದು ವಾರದೊಳಗೆ ತಮ್ಮ ಇಲಾಖೆಗೆ ಒಪ್ಪಿಸಬೇಕೆಂದು ಸಾಬೀತು ಮಾಡಿದರು.

ಅಳಶಿಂಗ್ರಾಚಾರ್ಯರಿಗೆ ರೀತಿ ರಿವಾಜುಗಳೇನೂ ಗೊತ್ತಿರಲಿಲ್ಲ. ಮೊದಲಿಂದಲೂ ಸ್ವಾಮಿ ಪೂಜೆ ಮಾಡುತ್ತಿದ್ದುದರಿಂದ ಅದನ್ನೇ ಮುಂದರೆಸಿದ್ದರು. ಪಾಕಶಾಲೆಯಲ್ಲಿ ಪ್ರಸಾದ ಮಾಡುವವರಿಗೂ ಪ್ರಮೋಶನ್ನಿದೆ, ಅವರೂ ಅರ್ಚಕರಾಗಬಹುದೆಂಬ ಮಾಹಿತಿಯೇ ಅವರಿಗಿರಲಿಲ್ಲ. ನೋಟೀಸನ್ನು ನೋಡಿ ಕಂಗಾಲಾದ ಆಚಾರ್ಯರು, ತಮ್ಮ ಮುತ್ತಾತನ ಕಾಲದಿಂದ ತಿಜೋರಿಯಲ್ಲಿಟ್ಟಿದ್ದ ಎಲ್ಲಾ ಕಾಗದ ಪತ್ರಗಳ ಕಟ್ಟನ್ನು

ತಮ್ಮ ಕೃಷ್ಣಾಜಿನದ ಚೀಲದಲ್ಲಿ ತುಂಬಿಕೊಂಡು, ದುಡು ದುಡು ಓಡಿಯೇ ಬಂದು, ಆ ಕಟ್ಟನ್ನು ಚಾಮೇಗೌಡರ ಮೇಜಿನ ಮೇಲಿರಿಸಿ ಕಟಬದ್ಧರಾಗಿ ನಿಂತರು. ಕಿಗ್ಗಲನಾಮ ಸಂವತ್ಸರದ ಆ ಕಾಗದಗಳ ವಾಸನೆಯನ್ನು ಆಘ್ರಾಣಿಸಿದ ಗೌಡರಿಗೆ ಹೊಟ್ಟೆ ತೊಳಸಿ ವಾಕರಿಗೆ ಬಂದಂತಾಯ್ತು. ಪತ್ರಗಳು ನುಸಿಹಿಡಿದು, ಅಲ್ಲಲ್ಲಿ ಜೀರ್ಣವಾಗಿ ಕಂದುಬಣ್ಣಕ್ಕೆ ತಿರುಗಿತ್ತು. ಅದರ ಮೇಲೆ ಕುಂಟು ಪಂಕ್ತಿಗಳೊಂದಿಗೆ ಬರೆದಿದ್ದ ಬ್ರಹ್ಮಲಿಪಿಯನ್ನು ಜೀರ್ಣಿಸಿಕೊಳ್ಳುವುದಿರಲಿ, ಓದುವುದೇ ದುಸ್ಸಾಧ್ಯವಾಗಿತ್ತು.

ಅಳಸಿಂಗ್ರಾಚಾಯರರನ್ನು ಸಾಗಹಾಕಿ, ಚಾಮೇಗೌಡರು, ಪತ್ರಗಳ ಕಟ್ಟನ್ನು ಓರಿಯಂಟ್ ಲೈಬ್ರರಿಗೆ ರವಾನಿಸಿ, ಪತ್ರದಲ್ಲಿರುವ ವಿಷಯವನ್ನು ತಮಗೆ ಪತ್ರ ಮುಖೇನ ತಮಗೆ ತಿಳಿಸಬೇಕೆಂದು ಆ ಇಲಾಖೆಗೆ ಕೋರಿಕೆ ಸಲ್ಲಿಸಿ ಕೈಕಟ್ಟಿ ಕೂತರು.

ಅನಿಶ್ಚಿತೆಯಿಂದ ಕೂಡಿದ ಅರ್ಚಕಸ್ಥಾನದಲ್ಲಿ ಮುಂದುವರೆದ ಅಳಶಿಂಗ್ರಾಚಾರ್ಯರು ಸ್ವಾಮಿಯ ಪೂಜೆಯಲ್ಲಿ ಅಲಕ್ಷತೆಯನ್ನೇ ತೋರಿದರು. ಆಂಜನೇಯ ಸ್ವಾಮಿಯನ್ನು ನೂರೆಂಟು ವಿಧದಲ್ಲಿ ಅಲಂಕರಿಸಿ ವಿಶೇಷ ಉತ್ಸವಗಳನ್ನು ಮಾಡಿಸುತ್ತಿದ್ದ ಆಚಾರ್ಯರು, ಉದಾಸೀನತೆಯಿಂದ ಒಂದೆರಡು ಶ್ಲೋಕಗಳನ್ನು ಹೇಳಿ, ಆರತಿ ತೋರಿಸಿ ಪೂಜಾಕ್ರಮವನ್ನು ಮೊಟಕುಗೊಳಿಸಿ, ಮುಜರಾಯಿ ಇಲಾಖೆಯಲ್ಲಿ ಬಂದು ಕೂತು ಚಾಮೇಗೌಡರಿಗೆ ತಲೆನೋವು ತರಿಸುತ್ತಿದ್ದರು. ತಮ್ಮನ್ನು ಅರ್ಚಕ ವೃತ್ತಿಗೆ ಪ್ರಮೋಟ್ ಮಾಡದೆ ಸರ್ಕಾರ ಸತಾಯಿಸುತ್ತಿರುವುದನ್ನು ಕಂಡು ಪಾಕಶಾಸ್ತ್ರಿ ಶಠಕೋಪೈಂಗಾರ್ಯರು, ಪ್ರಸಾದ ತಯಾರಿಸುವುದರಲ್ಲಿ ಅಲಕ್ಷತೆಯನ್ನೇ ತೋರಿದರು. ಉಪ್ಪು, ಸಿಹಿ, ಖಾರಗಳಲ್ಲಿ ಅತೀವ ವ್ಯತ್ಯಾಸ ಪ್ರಸಾದದಲ್ಲಿ ಕಾಣಿಸಿಕೊಂಡು, ಭಕ್ತಾದಿಗಳು ಚರಪನ್ನು ತಿನ್ನುವುದಕ್ಕೆ ಹೆದರಿ ಹಿಂಜರಿದರು.

ಮಜರಾಯಿ ಇಲಾಖೆಯಿಂದ ರವಾನಿಸಿದ ಅಳಶಿಂಗ್ರಾಚಾರ್ಯರ ಕಾಗದಪತ್ರಗಳ ಕಟ್ಟು, ಓರಿಯಂಟಲ್ ಲೈಬ್ರರಿಯಿಂದ, ಆರ್ಕಿಯಲಾಜಿಕಲ್ ಲೈಬ್ರರಿ, ಮ್ಯೂಸಿಯಂ, ಹಾಗೂ ಪ್ರಾಚ್ಯ ಸಂಶೋಧನಾ ವಿಭಾಗ, ಮುಂತಾದ ಇಲಾಖೆಗಳಲ್ಲೆಲ್ಲಾ ಅಲೆದು ಅತ್ತೀಕಾಯಾಗಿ ಇನ್ನೂ ಜೀರ್ಣಸ್ಥಿತಿಗೆ ತಲುಪಿ, ಸಕಲ ಇಲಾಖೆಗಳ ಕಾಕಲಿಪಿಯ ಟಿಪ್ಪಣಿಗಳನ್ನು ಹೊತ್ತು ಮತ್ತೆ ಮಜರಾಯಿ ಇಲಾಖೆಗೆ ಮರಳಿಬಂದು, ಚಾಮೇಗೌಡರ ಮೇಜಿನ ಮೇಲೆ ಕೂತುಕೊಂಡಿತು. ಗೌಡರಿಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳುವುದೆಂದೇ ತಿಳಿಯದೆ ಎರಡು ತಿಂಗಳೂ ರಜಾ ಗುಜರಾಯಿಸಿ ತಲೆ ತಪ್ಪಿಸಿಕೊಂಡರು. ಸರ್ಕಾರಿ ಇಲಾಖೆಯ ನಿಧಾನಗತಿಯನ್ನು ಕಂಡು ಸಿಡಿಮಿಡಿಗೊಂಡ ಶಠಕೋಪೈಂಗಾರ್ಯರು ಸಿವಿಲ್ ಕೋರ್ಟಿನಲ್ಲಿ ದಾವೆ ಹೂಡಿದರು. ಶಠಕೋಪೈಂಗಾರ್ಯರು ವಾದಿಯಾಗಿಯೂ, ಮಜರಾಯಿ ಇಲಾಖೆ ಹಾಗೂ ಅಳಶಿಂಗ್ರಾಚಾರ್ಯರು ಉಭಯತಾಪಿ ಪ್ರತಿವಾದಿ ಸ್ಥಾನದಲ್ಲೂ ನಿಂತರು.

ಅಳಶಿಂಗ್ರಾಚಾರ್ಯರ ಹಾಗೂ ಶಠಕೋಪೈಂಗಾರ್ಯರ ಕಾಗದದ ಕಟ್ಟುಗಳು ಮಜರಾಯಿ ಇಲಾಖೆಯಿಂದ ಸಿವಿಲ್ ಕೋರ್ಟಿಗೆ ರವಾನೆಯಾಯಿತು. ಆ ರಿಕಾರ್ಡುಗಳು

ನ್ಯಾಯಾಲಯದಲ್ಲಿ ಎಕ್ಸಿಬಿಟ್‌ಗಳಾಗಿ ದಾಖಲೆಯಾಯಿತು. ಡಾಕ್ಯುಮೆಂಟುಗಳಲ್ಲಿ ಏನು ಬರದಿದೆ ಎಂಬುದನ್ನು ತಿಳಿಯುವುದು ಅಸಾಧ್ಯವಾಗಿದ್ದುದರಿಂದ, ಉಭಯತಾಪಿ ಲಾಯರುಗಳು ತಮಗೆ ತೋಚಿದ್ದನ್ನೇ ಹೇಳಿ ಅದು ಡಾಕ್ಯುಮೆಂಟಿನಲ್ಲಿದೆಯೆಂದು ವಾದಿಸಿದರು. ಜಡ್ಜಿ ಫಾಲಾಕ್ಷಯ್ಯನವರಿಗೆ ಈ ಕೇಸಿನಿಂದ ಬಲು ಮುಜುಗರಕ್ಕಿಟ್ಟುಕೊಂಡಿತು. ಡಾಕ್ಯುಮೆಂಟುಗಳ ತಲೆಬುಡ ಅವರಿಗೆ ತಿಳಿಯಲಿಲ್ಲ. ಮುಟ್ಟಿದರೆ ಪುಡಿಪುಡಿಯಾಗಿ ಉದುರಿಹೋಗುವಂತಹ ಪತ್ರಗಳಲ್ಲಿ ಏನು ಬರೆದಿದೆಯೆಂಬುದೇ ಅರ್ಥವಾಗದೆ ಅವರು ಕಂಗಾಲಾದರು. ಸಿವಿಲ್ ಜಡ್ಜಿಯಾಗಿ ಕೇಸನ್ನು ತೀರ್ಮಾನ ಮಾಡದೆ ಕೂಡಲು ಸಾಧ್ಯವೆ? ಕೇಸನ್ನು ಅಡ್ಜರ್ನ್ ಮಾಡುತ್ತಾ ಎಷ್ಟು ದಿನ ತಪ್ಪಿಸಿಕೊಳ್ಳಲು ಸಾಧ್ಯ? ಕಡೆಗೊಂದುದಿನ ಜಡ್ಜ್‌ಮೆಂಟನ್ನು ಕೊಟ್ಟೂ ಬಿಟ್ಟರು.

''ಅರ್ಚಕವೃತ್ತಿ, ಪಾಕಾಲೆಯವೃತ್ತಿ ಎರಡೂ ಒಂದೇ ಇಲಾಖೆಗೆ ಸೇರಿದ್ದರೂ, ಅದು ಪ್ರತ್ಯೇಕ ಯೂನಿಟ್‌ಗಳು, ಆದ್ದರಿಂದ ಪ್ರಮೋಷನ್ ಪಾಲಿಸಿ, ಪೇಸ್ಕೆಲು ಎರಡೂ ಒಂದೇ ರೀತಿಯಾಗಿರಬೇಕಾದ ಅಗತ್ಯವಿಲ್ಲ. ಆದ್ರಿಂದ ಅರ್ಚಕ ವೃತ್ತಿಯಲ್ಲಿ ಸೀನಿಯರ್ ಪೋಸ್ಟಾಗಿರುವ ಅಳಶಿಂಗ್ರಾಚಾರ್ಯರು, ಮುಖ್ಯ ಅರ್ಚಕರಾಗಿ ಖಾಯಮ್ಮಾಗಿ ಆ ಸ್ಥಾನದಲ್ಲಿ ದುಡಿಯತಕ್ಕದ್ದು. ಆ ಸ್ಥಾನಕ್ಕಿರುವ ಪೇಸ್ಕೇಲನ್ನು ಹಿಂಬಡ್ತಿಯೊಂದಿಗೆ ಅವರಿಗೆ ಕೊಡತಕ್ಕದ್ದು. ಹಾಗೆಯೇ ಪಾಕಶಾಲೆಯಲ್ಲಿ ದುಡಿಯುತ್ತಿರುವ ಶಠಕೋಪೈಂಗಾರ್‍ಯರಿಗೆ ಚೀಫ್ ಕುಕ್ಕಾಗಿ ಬಡ್ತಿಕೊಟ್ಟು, ಅವರನ್ನು ಆ ಸ್ಥಾನದಲ್ಲೇ ಕಂಟಿನ್ಯೂ ಮಾಡಿ, ಅದಕ್ಕಿರುವ ಮಾಸಿಕ ವೇತನವನ್ನು ರೆಟ್ರಾಸ್ಪೆಕ್ಟೀವಾಗಿ ಅವರಿಗೆ ಕೊಡಬೇಕು. ಮುಜರಾಯಿ ಇಲಾಖೆಯೆ ಕೋರ್ಟಿನ ಖರ್ಚನ್ನು ವಹಿಸಬೇಕು. ಈ ಎರಡೂ ಯೂನಿಟ್ಟಿಗೂ ಸೀನಿಯಾರಿಟಿ ಮೇಲೆ ಪೇಶಕಾರ್ ಆಗುವ ಅವಕಾಶವಿದೆ'' ಎಂದು ಫಾಲಾಕ್ಷಯ್ಯನವರು ಖಾಜಿನ್ಯಾಯಮಾಡಿ, ಕೈತೊಳೆದುಕೊಂಡರು. ಚಾಮೇಗೌಡರು ಸಮಾಧಾನದ ನಿಟ್ಟುಸಿರುಬಿಟ್ಟು ರಜೆಯನ್ನು ಕ್ಯಾನ್ಸಲ್ ಮಾಡಿ ತಮ್ಮ ಡ್ಯೂಟಿಗೆ ಹಾಜರಾದರು.

ಸಿವಿಲ್ ಕೋರ್ಟಿನ ಚಾರಿತ್ರಿಕ ತೀರ್ಪನ್ನು ಕೇಳಿದ ವಾದಿ, ಪ್ರತಿವಾದಿಗಳು ಸಂತೃಪ್ತ ತಮ್ಮ ಕೆಲಸಕ್ಕೆ ಮರಕುಂಟೆಗೆ ಹಿಂದಿರುಗಿದರು. ಮರಕುಂಟೆಯ ಮಹಾನುಭಾವರುಗಳಾದ ಅಳಶಿಂಗ್ರಾಚಾಯರ ಅಂದಿನ ಪೂಜೆ ಆಂಜನೇಯಸ್ವಾಮಿಗೆ ಅಜೀರ್ಣವಾದರೆ, ಸ್ವಾಮಿ ನೈವೇದ್ಯಕ್ಕೆ ಶಠಕೋಪೈಂಗಾರ್‍ಯರು ತಯಾರಿಸಿದ ಪ್ರಸಾದ ಭಕ್ತಾದಿಗಳಿಗೆ ಭೂಕ್ತ ಭೋಜನವಾಯಿತು.

ಹಾದಿಯಲ್ಲಿ ಕೇಳಿಸಿದ್ದು..

''ಇವತ್ತು ಬೆಳಿಗ್ಗೆ ಎಂಟು ಗಂಟೆಗೆ ಸರಿಯಾಗಿ ಕರೆಂಟು ಹೋಗುತ್ತೆ. ಟಿ.ವಿ. ಗಲಾಟೆ ಇರುಲ್ಲ ಅಂದ್ಕೊಂಡು ಮೊಟ್ಟ ಮೊದಲ ಬಾರಿ ಮೆಡಿಟೇಶನ್‌ಗೆ ಕೂತರೆ, ಕರೆಂಟ್ ಹೋಗ್ಲೇ ಇಲ್ಲಾರಿ. ಜೋರಾಗಿ ಟಿ.ವಿ. ಕೂಗಾಟ ಶುರು ಆಯ್ತು. ಏನನ್ಯಾಯ!''

ಗ್ರ್ಯಾಂಡ್ ಮಾಸ್ಟರ್ ಪದವಿಗೆ ಏಳು ಹೆಜ್ಜೆಗಳು

-ಐಸಾಕ್ ಅಸಿಮೋವ್

ಅನು: ಎಂ. ಎಸ್. ಕೆ. ಪ್ರಭು

(1986 ರಲ್ಲಿ ಐಸಾಕ್ ಅಸಿಮೋವ್‌ಗೆ 'ಸೈನ್ಸ್‌ಫಿಕ್ಷನ್ ರೈಟರ್ಸ್' ಅಮೆರಿಕಾದ ಗ್ರ್ಯಾಂಡ್ ಮಾಸ್ಟರ್ ಪ್ರಶಸ್ತಿ ಲಭಿಸಿತು. ತಾನು ಹೇಗೆ ಗ್ರ್ಯಾಂಡ್‌ಮಾಸ್ಟರ್ ಆದೆ ಎಂಬ ವಿಷಯದ ಬಗ್ಗೆ ಅಸಿಮೋವ್ ಈ ಲೇಖನದಲ್ಲಿ ತಿಳಿಹಾಸ್ಯ ಶೈಲಿಯಲ್ಲಿ ವಿವರಿಸಿದ್ದಾನೆ. ಅಸಿಮೋವ್ 1-92 ರಂದು ತೀರಿಕೊಂಡ.)

ಮೊದಲ ಹೆಜ್ಜೆ - ಸಾಗರಯಾನ

ನಾನು ರಷ್ಯದೇಶದಲ್ಲಿ ಹುಟ್ಟಿದೆ. ಮೊದಲ ಮಹಾಯುದ್ಧ, ಕ್ರಾಂತಿ, ಅಂತರ್ಯುದ್ಧ ಮತ್ತು ವಿದೇಶೀ ಆಕ್ರಮಗಳ ಪ್ರಭಾವಕ್ಕೆ ದೇಶ ಒಳಗಾಗಿದ್ದ ಕಾಲ. ಅಂತಹ ಪರಿಸ್ಥಿತಿಯಲ್ಲಿ ನನ್ನನ್ನು ದೇಶದ ಮೇಲೆ ಹೊರಿಸುವುದು ಕ್ರೂರವಾದ ವಿಚಾರವೇ ಸರಿ, ಆದರೆ ಇದರಲ್ಲಿ ನನ್ನ ತಪ್ಪೇನೂ ಇಲ್ಲ. ಆಂತಹ ನಿರ್ಧಾರಕ್ಕೆ ನನ್ನ ತಂದೆತಾಯಿಗಳೇ ಹೊಣೆ.

1922ರ ಕೊನೆಯ ಭಾಗದಲ್ಲಿ ಅಮೆರಿಕೆಗೆ ವಲಸೆ ಹೋಗುವುದು ಒಳ್ಳೆಯದೆಂಬ ನಿರ್ಧಾರಕ್ಕೆ ನನ್ನ ತಂದೆತಾಯಿಗಳು ಬಂದಿದ್ದರು. ಯಾವುದೇ ತೊಂದರೆಯಿಲ್ಲದೆ ಜೀವನ ಸಾಗಿಸುತ್ತಿದ್ದರು; ಕಿತ್ತು ತಿನ್ನುವ ಬಡತನವೇನೂ ಇರಲಿಲ್ಲ; ದೇಶಕ್ಕೆ ಒದಗಿದ ದುಃಸ್ಥಿತಿಯಿಂದ ಅವರಿಗೇನೂ ವಿಶೇಷವಾದ ಸಂಕಟ ಒದಗಿರಲಿಲ್ಲ. ಆದರೆ, ಅಮೆರಿಕೆ ಹೋಗುವುದರಿಂದ ಭವಿಷ್ಯದಲ್ಲಿ ಇನ್ನೂ ಒಳ್ಳೆಯ ಸ್ಥಿತಿಯನ್ನು ಅನುಭವಿಸಬಹುದೆಂದು ಅವರ ಅಂದಾಜು.

ನನ್ನನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕೇ, ಬೇಡವೇ ಎನ್ನುವ ಸಮಸ್ಯೆ ಅವರಿಗೆ ಎದುರಾಯಿತು. ನನಗಿನ್ನೂ ಮೂರು ತುಂಬಿರಲಿಲ್ಲ. ಡಬಲ್ ನ್ಯೂಮೋನಿಯ ಕಾಯಿಲೆಗೆ ಒಳಗಾಗುವುದು, ಹತ್ತಿರದ ಕೊಳದೊಳಕ್ಕೆ ಬೀಳುವುದು (ಸ್ವಲ್ಪ ವಿಚಾರ ಮಾಡಿ) ತನ್ನ ತಾಯಿ ನನ್ನನ್ನು ಹೊರಕ್ಕೆ ಎಳೆದುಹಾಕುವುದು-ಮುಂತಾದ ಆನಂದಗಳಿಗೆ ಅವಕಾಶ ಮಾಡಿಕೊಡುತ್ತಿದ್ದ ನಾನು ಇಲ್ಲದ್ದಿರೆ ಭವಿಷ್ಯದಲ್ಲಿ ಅಮೆರಿಕದಲ್ಲಿ ಅವರಿಗೆ ಒಳ್ಳೆ ಕಾಲ ಒದಗುತ್ತದೆಂದು ಅವರಿಗೆ ಗುಮಾನಿ ಇದ್ದಿರಬೇಕು.

ಆದರೆ, ಬಯುತೇಕ, ಅವರ ಕೈಗಳಿಂದ ನನ್ನನ್ನು ಸ್ವೀಕರಿಸುವಂಥ ಮೂರ್ಖರು ಯಾರೂ ಕಣ್ಣಿಗೆ ಬೀಳದಿದ್ದರಿಂದ, ಅವರು ಹತಾಶರಾಗಿ ನಿಟ್ಟುಸಿರುಬಿಟ್ಟು, ನನ್ನನ್ನು ಒಂದು ಹಸಬೆ ಚೀಲದಲ್ಲಿ ತುರುಕಿ, ನನ್ನ ಟಿಕೆಟಿನ ಹಣ ಉಳಿಸಿ, ಕರೆದೊಯ್ಯಬೇಕಾಯಿತು.

ಅವರ ಜೊತೆ ಸಾಗರವನ್ನು ದಾಟಿದ ನಾನು 1923ರ ಫೆಬ್ರವರಿಯಲ್ಲಿ ನನ್ನ ಮೂರನೆ ಹುಟ್ಟುಹಬ್ಬ ಕಳೆದು ಕೆಲವೇ ದಿನಗಳಾಗಿದ್ದಾಗ, ಬ್ರೂಕ್ಲಿನ್‌ನಲ್ಲಿ ಬಂದಿಳಿದೆ. ಗ್ರ್ಯಾಂಡ್ ಮಾಸ್ಟರ್ ಪದವಿ ಗಳಿಸಲು ಇದು ನಾನಿಟ್ಟ ಮೊದಲ ಹಜ್ಜೆ. ನಾನು ರಷ್ಯದಲ್ಲೇ ಉಳಿದುಕೊಂಡಿದ್ದರೆ, ನನಗೆ ಸಾಕಷ್ಟು ಶಿಕ್ಷಣವೇನೋ ಸಿಗುತ್ತಿತ್ತು. ಬರವಣಿಗೆಯನ್ನು ಮಾಡುತ್ತಿದ್ದೆ, ವೈಜ್ಞಾನಿಕ ಕಥೆಗಳನ್ನೂ ಬರೆಯುತ್ತಿದ್ದೆ. ಆದರೆ ಇಲ್ಲಿ ದೊರೆತಂಥ ಅವಕಾಶ ಅಲ್ಲಿ ಸಿಕ್ಕುತ್ತಿತ್ತು ಎನ್ನಲಾರೆ. 1941ರಲ್ಲಿ ನಾಜಿಗಳು ರಷ್ಯಾದ ಮೇಲೆ ಆಕ್ರಮಣ ಮಾಡಿದರು. ಆಗ ನನಗೆ 21 ವರ್ಷ. ಸೈನ್ಯದಲ್ಲಿ ಸೇರಿ ಯುದ್ಧ ರಂಗದಲ್ಲಿರುತ್ತಿದ್ದೆ ಎಂದು ಕಾಣುತ್ತದೆ. ಬಹುಶಃ ಯುದ್ಧದಲ್ಲಿ ಸತ್ತರೂ ಸಾಯುತ್ತಿದ್ದೆ. ಅಥವಾ ಅದಕ್ಕೂ ಕೆಟ್ಟದ್ದು ಏನಾದರೂ ನನಗೆ ಆಗಬಹುದಿತ್ತು. ಅಂದರೆ ನಾನೊಬ್ಬ ಯುದ್ಧ ಖೈದಿಯಾಗಬಹುದಿತ್ತು. ಅಥವಾ, ನಾನೇನಾದರೂ ಬದುಕುಳಿದ ಪಕ್ಷದಲ್ಲಿ, ನನ್ನ ಸರದಿ ಬರುವುದಕ್ಕೆ ಕಾಯದೆ ಮಾತನಾಡುವ ನನ್ನ ಸ್ವಭಾವದಿಂದಾಗಿ, ಸರ್ಕಾರದ ಅವಕೃಪೆಗೆ ಒಳಗಾಗಬಹುದಿತ್ತು (ಹಾಗೆ ನೋಡಿದರೆ, ಅಮೆರಿಕದಲ್ಲೂ ನಾನು ಅಂತಹ ತೊಂದರೆಗಳನ್ನು ಅನೇಕ ಸಲ ಎದುರಿಸಿದ್ದೇನೆ)

ಕೊನೆಯದಾಗಿ, ಸೋವಿಯತ್ ಯೂನಿಯನ್‌ನಲ್ಲಿ ಗ್ರ್ಯಾಂಡ್ ಮಾಸ್ಟರ್ ಪ್ರಶಸ್ತಿ ಇದೆಯೋ ಇಲ್ಲವೋ ತಿಳಿಯದು. ಒಟ್ಟಿನಲ್ಲಿ, ನನ್ನ ಸಾಗರಯಾನ ಅತ್ಯವಶ್ಯಕವಾಗಿದ್ದಿತು.

ಎರಡನೆಯ ಹೆಜ್ಜೆ- ನನ್ನ ಸ್ವಂತ ವ್ಯಕ್ತಿತ್ವಕ್ಕಾಗಿ ಆಗ್ರಹ

ನನ್ನ ತಂದೆ ತಾಯಿಗಳು ಅಮೆರಿಕಕ್ಕೆ ಬಂದ ಮೇಲೆ ಅವರು 'ಗುಗ್ಗು' ಅಭಿದಾನದ ಸ್ಥಾನ-ಮಾನವನ್ನು ಗಳಿಸಿದರೆಂದು ತಿಳಿದುಕೊಂಡರು. ಅಮೆರಿಕೆಯ ಪ್ರಜೆಗಳಾಗಲು ನಾನು ಅನುಸರಿಸಬೇಕಾದ ಮಾರ್ಗದ ಬಗ್ಗೆ ತಿಳುವಳಿಕೆಕೊಟ್ಟು ಉಪದೇಶ ನೀಡಲು ಎಲ್ಲರೂ - ವಿಶೇಷವಾಗಿ ನಮಗಿಂತ ಐದು ವರ್ಷ ಮೊದಲುಬಂದ ವಲಸೆಗಾರರು-ತುಂಬಾ ಕಾತರರಾಗಿದ್ದರು.

ನನಗೆ ನಾಲ್ಕೋ ಐದೋ ವರ್ಷವಿರಬೇಕು, ನನ್ನ ವಯಸ್ಸಿಗೆ ಚಿಕ್ಕವನಂತೆ ಇದ್ದುದರಿಂದ ನನ್ನನ್ನು ಯಾರೂ ಗಮನಿಸುತ್ತಿರಲಿಲ್ಲ. ದೊಡ್ಡವರ ಕಾಲಿಗೆ ಸಿಕ್ಕಿ ಹಾಕಿಕೊಳ್ಳುತ್ತಿದ್ದೆ. ಒಂದು ದಿನ ನಮ್ಮ ನೆರೆಯಾಕೆಯೊಬ್ಬಳು ನನ್ನ ತಾಯಿಗೆ ನನಗೆ ಕೇಳುವಂತೆಯೇ ಹೇಳುತ್ತಿದ್ದಳು. 'ಮಿಸೆಸ್ ಅಸಿಮೋವ್, ನೀವು ಅವನನ್ನು ಐಸಾಕ್ ಎಂದೇಕೆ ಕರೆಯುತ್ತೀರಿ? ಅಂಥ ಹೆಸರಿದ್ದರೆ ಅವನಿಗೆ ಯಾವಾಗಲೂ ಕಳಂಕ'

(ಅನುವಾದ: 'ಅವನೊಬ್ಬ ಯಹೂದಿ ಎಂದು ಎಲ್ಲರಿಗೂ ತಿಳಿಯುತ್ತದೆ')

ನನ್ನ ತಾಯಿ ಕೇಳಿದಳು: ''ಹಾಗಾದರೆ ಅವನನ್ನು ಏನೆಂದು ಕರೆಯಬೇಕು, ಮಿಸೆಸ್ ಬಿಂಡ್ಲರ್?''

ಆಗ ಮಿಸೆಸ್ ಬಿಂಡ್ಲರ್ (ಅಥವಾ ಅವಳ ಹೆಸರು ಏನಿತ್ತೋ ಅದು) ಹೇಳಿದಳು:

''ಓಯ್‌ವಿಂಗ್ ಎಂದು ಕರೆಯಿರಿ'' (ಅನುವಾದ: ಅರ್ವಿಂಗ್. ಇದೊಂದು ಘನತೆವೆತ್ತ ಪುರಾತನ ಇಂಗ್ಲೀಷ್ ಕುಟುಂಬದ ಹೆಸರು)

ನನ್ನ ತಾಯಿಯ ಮೇಲೆ ಈ ಮಾತು ಬಹಳ ಪರಿಣಾಮಮಾಡಿ, ಅವಳು ಸಲಹೆಯನ್ನು ಒಪ್ಪಿಕೊಂಡೇ ಬಿಡುತ್ತಿದ್ದಳು. ಆದರೆ, ನಾನು ಆಗಲೇ ಹೇಳಿದ ಹಾಗೆ ನಾನು ಅವರ ಮಾತುಗಳನ್ನು ಎರಡೂ ಕಿವಿಗಳಿಂದ ಕೇಳುತ್ತಿದ್ದೆ. ಪದಾರ್ಥದ ಹೆಸರೇ ಪದಾರ್ಥವಲ್ಲ ಎಂಬ ಶಬ್ದಾರ್ಥ ನಿರ್ವಚನ ಜ್ಞಾನ ನನಗಾಗ ಇರಲಾರದಷ್ಟು ಚಿಕ್ಕವನಿದ್ದೆ. ನನ್ನನ್ನು ಐಸಾಕ್ ಎಂದು ಕರೆಯುತ್ತಾರೆ ಮಾತ್ರ, ಆದರೆ ಬೇರೇನೂ ಕರೆದಿದ್ದರೂ ನಾನು ನಾನಾಗಿಯೇ ಉಳಿಯುತ್ತೇನೆ ಎಂದು ಆಗ ನನಗೆ ಅರ್ಥವಾಗಿರಲಿಲ್ಲ. (ಅಥವಾ, ನಾನು ಒಮ್ಮೆ ಅಚ್ಚುಕಟ್ಟಾಗಿ ಹೇಳಿದ್ದಂತೆ, ಯಾವುದನ್ನು ನಾವು ಗುಲಾಬಿ ಎಂದು ಕರೆಯುತ್ತೇವೋ, ಬೇರಾವ ಹೆಸರಿನಿಂದಲೂ ಅದು ಅಷ್ಟೇ ಸುವಾಸನೆಯುಳ್ಳದ್ದಾಗಿರುತ್ತದೆ)

ನಾನೇನಂದುಕೊಂಡಿದ್ದೇನೆಂದರೆ, ಐಸಾಕ್ ಎಂದರೆ ನಾನೇ, ನನ್ನನ್ನು ಬೇರಾವ ಹೆಸರಿನಿಂದ ಕರೆದರೂ ನಾನು ನಾನಲ್ಲ. ಆದ್ದರಿಂದ ನಾನೊಂದು ರಂಪ ಎಬ್ಬಿಸಿ ನನ್ನನ್ನು ಓಯ್‌ವಿಂಗ್ ಎಂದು ಕರೆಯಲು ನಡೆದಿದ್ದ ಸನ್ನಾಹವನ್ನು ಪ್ರತಿಭಟಿಸಿ ಯಾವುದೇ ಕಾರಣಕ್ಕಾಗಿ ಆ ಹೆಸರನ್ನು ಒಪ್ಪಿಕೊಳ್ಳಲು ಬಿಲ್‌ಕುಲ್ ನಿರಾಕರಿಸಿದೆ. ನಾನು ಐಸಾಕ್ ಆಗಿದ್ದೆ ಮತ್ತು ಎಂದೆಂದೂ ಐಸಾಕ್ ಆಗಿ ಉಳಿಯಲು ಉದ್ದೇಶಿಸಿದೆ-ಹಾಗೆ ಉಳಿದೆ. ನನ್ನ ಕೆಚ್ಚಿನ ರೋಷದಡಿಯಲ್ಲಿ ನನ್ನ ತಾಯಿ ಮುಲುಗುಟ್ಟಿದಳು.

ಗ್ರ್ಯಾಂಡ್ ಮಾಸ್ಟರ್ ಪದವಿಯತ್ತ ನನ್ನ ಅರಿವಿಲ್ಲದೆ ನಾನಿಟ್ಟ ಎರಡನೆಯ ಹೆಜ್ಜೆ ಅದಾಗಿತ್ತು. ಓಯ್‌ವಿಂಗ್ ಅವನು ನಾನು ಒಪ್ಪಿಕೊಂಡಿದ್ದರೆ, ಅದು ಐಸಾಕ್‌ನಷ್ಟೇ ಕಳಂಕಪ್ರಾಯವಾಗುತ್ತಿತ್ತು. ಯಾಕೆಂದರೆ, ತಮ್ಮ ಎಳೆಯ ಆಶಾಕುಡಿಗಳಿಗೆ ಆ ಹೆಸರನ್ನು ಕೊಟ್ಟು ಎಷ್ಟೋ ಯಹೂದಿ ಮಾತೆಯರು ಪರಿಹಾರೋಪಾಯವನ್ನು ಹುಡುಕುತ್ತಿದ್ದರು. ಆದ್ದರಿಂದ ಓಯ್‌ವಿಂಗ್ ಐಸಾಕ್‌ನಷ್ಟೇ ಪರಿಚಿತವಾದ ಯಹೂದಿ ಹೆಸರಾಗಿಬಿಟ್ಟಿತ್ತು. ಆದರೆ ಐಸಾಕ್‌ಗಿರುವ ಬೈಬಲ್‌ನ ಮುದ್ರೆ ಮಾತ್ರ ಅದಕ್ಕಿರಲಿಲ್ಲ. (ಅದೂ ಅಲ್ಲದೆ ನ್ಯೂಟನ್‌ನ ಹೆಸರೂ ಐಸಾಕ್, ನನ್ನ ಮಟ್ಟಿಗೆ ಹೇಳುವುದಾದರೆ,

ಇಮ ಬೈಬಲ್‌ಗಿಂತ ಒಳ್ಳೆಯ ಸಂಬಂಧವೇ)

ಐಸಾಕ್ ತಪ್ಪಿಹೋಗಿದ್ದರೆ, ನಾನು ಓಯ್‌ವಿಂಗ್‌ನನ್ನು ದ್ವೇಷಿಸುತ್ತಾ ನನ್ನ ಹೆಸರನ್ನು ಆಯಾನ್ ಎಂದು ಬದಲಾಯಿಸಿಕೊಳ್ಳುತ್ತಿದ್ದೆ. ಅಸಿಮೋವ್ ಜೊತೆ ಆಯಾನ್ ಹಾಸ್ಯಾಸ್ಪದವೆಂದು ಅರಿತುಕೊಂಡು, ನನ್ನ ಕೊನೆಯ ಹೆಸರನ್ನು ಆರ್‌ಫರ್ಡ್ ಎಂದು ಬದಲಾಯಿಸಿ, ನಾನು ಆಯಾನ್ ಆರ್‌ಫರ್ಡ್ ಆಗಿ ವೈಜ್ಞಾನಿಕ ಕಥೆಗಳನ್ನು ಬರೆಯಬೇಕಾಗಿ ಬರುತ್ತಿತ್ತು.

ಹೆಸರಿನ ಮಾನ್ಯತೆಯಲ್ಲಿ ನನ್ನದು ಅಚಲ ವಿಶ್ವಾಸ. ಆಯಾನ್ ಆರ್‌ಫರ್ಡ್ ಎಂಬ ಹೆಸರನ್ನು ಯಾರೂ ಗಮನಿಸುತ್ತಿರಲಿಲ್ಲ, ನೆನಪಿಟ್ಟುಕೊಳ್ಳುತ್ತಿರಲಿಲ್ಲ. ಐಸಾಕ್ ಅಸಿಮೋವ್ ಎನ್ನುವ ಹೆಸರಾದರೆ, ತಕ್ಷಣ ಗಮನ ಸೆಳೆಯುವಂಥದು. ಈ ಹೆಸರನ್ನು ಹೇಗೆ ಉಚ್ಚರಿಸಬೇಕೆಂದು ಜನ ನಗುನಗುತ್ತಾ ಚರ್ಚೆಮಾಡುತ್ತಾರೆ. ಅದೇ ಹೆಸರಿನಲ್ಲಿ ಎರಡನೇ ಕಥೆ ಪ್ರಕಟವಾದಾಗ, ಗಮನಿಸುತ್ತಾರೆ, ಮತ್ತೊಂದು ಕಥೆಗಾಗಿ ತುದಿಗಾಲಿನ ಮೇಲೆ ಕಾಯುತ್ತಾರೆ, ಕಥೆ ಏನೂ ಚೆನ್ನಾಗಿರದಿದ್ದರೂ, ನನ್ನ ಹೆಸರಿನ ಮೇಲೆ ಚರ್ಚೆ ಮಾಡುವುದಕ್ಕೆ ಭಯಂಕರ ವಸ್ತುವಾಗುತ್ತದೆ. ನನ್ನ ಹೆಸರನ್ನು ಉಳಿಸಿಕೊಳ್ಳಬೇಕೆಂಬ ಒಳ್ಳೆಯ ಬುದ್ಧಿ ನನಗಿರದಿದ್ದರೆ, ನಾನು ಹೇಳ ಹೆಸರಿಲ್ಲದಂತೆ ನಾಶವಾಗಿ ಹೋಗಿಬಿಡುತ್ತಿದ್ದೆ.

ಮೂರನೆಯ ಹೆಜ್ಜೆ - ನಾನು ಸಬ್‌ವೇ ಲೈನ್ ನಿವಾಸಿ

ನನಗೆ ಹದಿನೆಂಟು ವರ್ಷದ ವಯಸ್ಸಾಗಿದ್ದಾಗ 'ಅಸ್ಟೌಂಡಿಂಗ್ ಸೈನ್ಸ್ ಫಿಕ್ಷನ್'ನ ಸಂಪಾಕರನಾಗಿದ್ದ ಜಾನ್ ಡಬ್ಲ್ಯೂ ಕ್ಯಾಂಬೆಲ್ ಜೂ. ಗೆ ಕಳಿಸಲು ಒಂದು ಕಥೆ ಸಿದ್ಧಮಾಡಿದ್ದೆ. ಆ ಕೆಲಸವನ್ನು ಹೇಗೆ ನಿರ್ವಹಿಸಬೇಕೋ ನನಗೆ ತಿಳಿದಿರಲಿಲ್ಲ. ವೈಚಾರಿಕವಾಗಿ ನೋಡಿದರೆ, ಅಂಚೆ ಮೂಲಕ ಕಳಿಸಬೇಕಾಗಿತ್ತು. ಆದರೆ ಕಥೆ ಮತ್ತು ಲಕೋಟೆ ಮೂರು ಔನ್ಸ್‌ಗಳಿಗಿಂತ ಸ್ವಲ್ಪ ಹೆಚ್ಚು ತೂಕವಿದ್ದು ಮೂರು ಸೆಂಟ್‌ಗಳ ನಾಲ್ಕು ಸ್ಟಾಂಪ್‌ಗಳು- ಒಟ್ಟು ಹನ್ನೆರಡು ಸೆಂಟ್‌ಗಳು ಬೇಕಾಗಿತ್ತು.

ನಾನು ಸಬ್‌ವೇದಲ್ಲಿ ಪ್ರಯಾಣ ಮಾಡಿದ್ದರೆ, ಹೋಗಲು ಐದು, ಬರಲು ಐದು - ಒಟ್ಟು ಹತ್ತು ಸೆಂಟ್ ವೆಚ್ಚ ತಗಲುತ್ತಿತ್ತು. ಸಬ್‌ವೇ ಪ್ರಯಾಣ ಅರ್ಧಗಂಟೆ ಅವಧಿಯದಿತ್ತು. ಆದರೆ, ಆ ದಿನಗಳಲ್ಲಿ ನನ್ನ ಕಾಲಕ್ಕೆ ಏನೂ ಬೆಲೆ ಇರಲಿಲ್ಲ. ಹನ್ನೆರಡು ಮತ್ತು ಹತ್ತು ಸೆಂಟ್‌ಗಳ ಸಾಪೇಕ್ಷ ಮೌಲ್ಯವನ್ನು ತುಲನೆಮಾಡಿ, ಎರಡು ಸೆಂಟ್‌ಗಳು ಬೆಲೆಯುಳ್ಳ ವಸ್ತುವೆಂಬ ತೀರ್ಮಾನಕ್ಕೆ ಬಂದೆ. ಸಬ್‌ವೇ ಪ್ರಯಾಣ ಕೈಗೊಂಡೆ.

ವಿಪರೀತ ವೇದನೆ ಮತ್ತು ಭಯಪೀಡಿತನಾಗಿ ಸ್ವಾಗತಕಾರಿಣಿಯನ್ನು ಸಮೀಪಿಸಿದಾಗ, ನನ್ನ ಹಸ್ತಪ್ರತಿಯನ್ನು ನಾಲ್ಕು ಭಾಗಗಳಾಗಿ ಹರಿದು ಅವುಗಳ ಜೊತೆ

ನನ್ನನ್ನು ಕ್ಯಾಂಬೆಲ್ ಹೊರಕ್ಕೆ ಅಟ್ಟುತ್ತಾನೆಂದು ನಿರೀಕ್ಷಿಸಿದ್ದೆ. ಕ್ಯಾಂಬೆಲ್ ನನ್ನನ್ನು ಭೆಟ್ಟಿಯಾಗಲು ಮನಸ್ಸು ಮಾಡಿದ್ದ. ನಾವು ಒಂದು ಗಂಟೆ ಕಾಲ ಮಾತುಕತೆಯಾಡಿದೆವು. ಅವನು ನನ್ನ ಬರಹವನ್ನು ಬೇಗ ಓದಿ ಬೇಗನೇ ಅದನ್ನು ಒಂದು ಸಹಾನುಭೂತಿಯುಕ್ತ ಹಾಗೂ ಉಪಯುಕ್ತ ಪತ್ರದೊಂದಿಗೆ ತಿರಸ್ಕರಿಸಿ ಹಿಂದಿರುಗಿಸಿದ. ಅನಂತರ ನಾನು ಅವನನ್ನು ತಿಂಗಳಿಗೊಮ್ಮೆ ಭೇಟಿಯಾಗುತ್ತಿದ್ದೆ. ನಾನು ಮುಂದುವರೆಯುತ್ತಿದ್ದೆ.

ಇದು ಹೇಗಾಯಿತು? ನಿರ್ಣಯಾತ್ಮಕವಾದ ಅಂಶಗಳಾವುವು? ಸುಲಭ! ನಾನು ಸಬ್‌ವೇ ನಿಲ್ದಾಣದಿಂದ ಅರ್ಧ ಬ್ಲಾಕ್ ದೂರದಲ್ಲಿ ವಾಸವಾಗಿದ್ದೆ. ಉತ್ತರ ಡಕೋಟಾದ ಫರಾಗೋದಲ್ಲಿ ನನ್ನ ಮನೆಏನಾದರೂ ಇದ್ದಿದ್ದರೆ, ರೈಲ್ವೆಪ್ರಯಾಣದ ವೆಚ್ಚ ಹನ್ನೆರಡು ಸೆಂಟ್‌ಗಳಿಗಿಂತ ಜಾಸ್ತಿಯಾಗಿರುತ್ತಿತ್ತು. ನಾನು ಸ್ಟೇಫನ್ ದ್ವೀಪದಲ್ಲೇನಾದರೂ ಇದ್ದಿದ್ದರೆ, ದೋಣಿ ಪ್ರಯಾಣಕ್ಕೆ ಇನ್ನೂ ಹತ್ತು ಸೆಂಟ್ ಖರ್ಚುಬಿದ್ದು, ನಾನು ಹನ್ನೆರಡು ಸೆಂಟ್ ಮತ್ತು ಇಪ್ಪತ್ತು ಸೆಂಟ್‌ಗಳನ್ನು ಹೋಲಿಸಿ ಲಕೋಟೆಯನ್ನು ಅಂಚೆ ಡಬ್ಬದಲ್ಲಿ ಹಾಕಿಬಿಡುತ್ತದೆ. ಜಾನ್ ಕ್ಯಾಂಬೆಲ್‌ನನ್ನು ನಾನು ಎಂದೆಂದೂ ಭೆಟ್ಟಿಯಾಗುತ್ತಿರಲಿಲ್ಲ ಮತ್ತು ಆ ಮಹಾ ಸಂಪಾದಕನಿಂದ ದೊರಕಬಹುದಾದಂಥ ಪ್ರೋತ್ಸಾಹ ನನಗೆ ಸಿಕ್ಕುತ್ತಿರಲಿಲ್ಲ.

ಸಬ್‌ವೇ ಸ್ಟೇಷನ್ ಜಿಂದಾಬಾದ್ ಅದಿಲ್ಲದಿದ್ದರೆ ಗ್ರ್ಯಾಂಡ್ ಮಾಸ್ಟರ್‌ಗಿರಿ ನನಗೆ ಗಿಟ್ಟುತ್ತಿರಲಿಲ್ಲ.

ನಾಲ್ಕನೆಯ ಹೆಜ್ಜೆ- ನಾನು ಆಯತ ವೇಳೆಗೆ ಬಂದೆ

ಪ್ರತಿ ಸಲ ಕ್ಯಾಂಬೆಲ್‌ನನ್ನು ಕಾಣಲು ಬಂದಾಗಲೂ ಒಂದೊಂದು ಹೊಸ ಐಡಿಯಾದೊಡನೆ ಬರುತ್ತಿದ್ದೆ. ಕ್ಯಾಂಬೆಲ್‌ಗೆ ತನ್ನದೇ ಆದ ಐಡಿಯಾ ಇರುತ್ತಿತ್ತು. ಬರಹಗಾರನ ಐಡಿಯಾ ಮತ್ತು ಕ್ಯಾಂಬೆಲ್‌ನ ಐಡಿಯಾಗಳ ನಡುವಿನ ಪೈಪೋಟಿಯಲ್ಲಿ ಯಾವಾಗಲೂ ಕ್ಯಾಂಬೆಲ್ ಜಯಶಾಲಿಯಾಗುತ್ತಿದ್ದ. ಕಡೇಪಕ್ಷ, ನನ್ನ ವಿಚಾರದಲ್ಲದಂತೂ ಈಗಾಗುತ್ತಿತ್ತು.

ಒಂದು ದಿನ ಕ್ಯಾಂಬೆಲ್‌ಗೆ ಒಂದು ಭಯಂಕರ ಒಳ್ಳೆ ಐಡಿಯಾ ಹೊಳೆಯಿತು. ಅದನ್ನು ಯಾರಮೇಲೆ ಹೇರಲಿ ಎಂದು ಚಡಪಡಿಸುತ್ತಿದ್ದ. ಅವನೇನೂ ವಿಶದವಾಗಿ ಈ ವಿಚಾರ ನನಗೆ ಹೇಳಲಿಲ್ಲ. ಆದರೆ, ಒಬ್ಬ ಅಮಾಯಕ ಪಾಪದ ಲೇಖಕನ ಮೇಲೆ ಎರಗಲು ಹೊಂಚುಹಾಕಿ ತನ್ನ ರೊಪ್ಪದಲ್ಲಿ ಕಾದಿರುವ ರಣಹದ್ದಿನಂತೆ ಅವನು ಕಾಯುತ್ತಿದ್ದಿರಬೇಕೆಂದು ನನ್ನಲ್ಲಿ ಮಾನಸಿಕ ಚಿತ್ರ ಮೂಡಿತು (ರಣ ಹದ್ದುಗಳಿಗೆ ರೊಪ್ಪಗಳಿರುತ್ತವೆಂದು ಊಹಿಸಿಕೊಳ್ಳಿ.) ಅವನಿಗೆ ಆಗ ಬೇಕಾಗಿದ್ದುದು ಒಬ್ಬ ಲೇಖಕ ಯಾವುದೇ ಲೇಖಕ.

ಇಪ್ಪತ್ತೊಂದು ವರ್ಷ ಪ್ರಾಯದ ನಾನು ಸೀದಾ ಬಂದು ''ಹಲ್ಲೋ, ಮಿ. ಕ್ಯಾಂಬೆಲ್'' ಎಂದಾಗ ಅವನಿಗೆ ಅಸಹ್ಯವಾದ ಆಘಾತವಾಗಿರಬೇಕು. ಅವನನ್ನು ಅಮರಿಕೊಂಡಿದ್ದ ಐಡಿಯಾದ ಹಿಡಿತ ಅವನ ಮೇಲೆ ಎಷ್ಟು ಪ್ರಬಲವಾಗಿತ್ತೆಂದರೆ, ಕ್ಷಣಕಾಲ ಬೆಚ್ಚಿ ಸಾವರಿಸಿಕೊಂಡು, ನಾನು ವಿವರಿಸುತ್ತಿದ್ದ ವಿಷಯವನ್ನು ತಳ್ಳಿ ಹಾಕಿ, ಹೇಳಿದ: ''ಅದೆಲ್ಲಾ ಒತ್ತಟ್ಟಿಗಿರಲಿ, ಅಸಿಮೋವ್ ಎಮರ್ಸನ್‌ನ ಪ್ರಬಂಧದಿಂದ ಆಯ್ದ ಒಂದು ಉದ್ಧರಣವನ್ನು ಓದುತ್ತೇನೆ ಕೇಳು.''

ಮಾನವರು ಒಂದು ಸಾವಿರ ವರ್ಷದಲ್ಲಿ ಒಮ್ಮೆ ಮಾತ್ರ ನಕ್ಷತ್ರಗಳನ್ನು ನೋಡುವಂತಹ ಅವಕಾಶವಿದ್ದರೆ, ಅವರಿಗೆ ಎಂತಹ ಪರಮಾಶ್ಚರ್ಯವಾಗುತ್ತಿತ್ತು ಎಂಬ ಅಭಿಪ್ರಾಯ ಬರುವ ಬರಹವನ್ನು ಅವನು ಓದಿದ. ''ಜನರಿಗೆ ಪರಮಾಶ್ಚರ್ಯವಾಗುತ್ತಿರಲಿಲ್ಲ, ಹುಚ್ಚು ಹಿಡಿಯುತ್ತಿತ್ತು. ನೀನೀಗ ಮನಗೆ ಹೋಗಿ ಆ ಕಥೆಯನ್ನು ಬರಿ. ಹೂಂ! ಹೊರಡು'' ಎಂದ ಕ್ಯಾಂಬೆಲ್.

ನಾನು ಹೆದರಿಕೆಯಿಂದ ನಡುಗುತ್ತಾ ಮನೆಗೆ ಬಂದು ಟೈಪರೈಟರ್ ಮುಂದೆ ಕುಳಿತು ''ನೈಟ್‌ಫಾಲ್'' ಕಥೆಯನ್ನು ಕುಟ್ಟಿದೆ. ಅದು ಸೆಪ್ಟೆಂಬರ್ 1941ರ 'ಅಸ್ಟೌಂಡಿಂಗ್'ನಲ್ಲಿ ಪ್ರಕಟವಾಯಿತು. ಮೂರು ವರ್ಷಗಳ ಪ್ರಯತ್ನದ ನಂತರ ಅದು ನನ್ನ ಮೊದಲ ಯಶಸ್ವೀ ಕಥೆ. ರಾಬರ್ಟ್ ಹೈನ್‌ಲೀನ್ ತನ್ನ ಮೊದಲ ಕಥೆಯಲ್ಲೇ ಯಶಸ್ವಿಯಾಗಿದ್ದ. ಎ.ಇ. ವಾನ್‌ವೋಗ್ಟ್ ಮೊದಲ ಕಥೆಯಲ್ಲೇ ಯಶಸ್ವೀ ಲೇಖಕನಾಗಿದ್ದ; ಆರ್ಥರ್ ಸಿ. ಕ್ಲರ್ಕ್ ತನ್ನ ಮೊದಲ ಕಥೆಯಲ್ಲೇ ಯಶಸ್ಸು ಸಂಪಾದಿಸಿದ್ದ; ನಾನೂ ಏನು ಕಮ್ಮಿ ಇರಲಿಲ್ಲ ನನ್ನ ಹದಿನಾರನೇ ಕಥೆಯಲ್ಲಿ ಯಶಸ್ವೀ ಲೇಖಕನಾಗಿದ್ದೆ.

''ನೈಟ್‌ಫಾಲ್'' ಒಂದು ನಿರ್ಣಾಯಕ ಘಟ್ಟ. ಅದಕ್ಕೆ ಗಿರಾಕಿ ದೊರೆತ ನಂತರ ನಾನು ಬರೆದು ಪ್ರತಿಯೊಂದು ಕಥಾ ಸಾಹಿತ್ಯದ ಪದವನ್ನೂ ಮಾರುವುದರಲ್ಲಿ ನಾನು ಸೋತಿಲ್ಲ (ಕೆಲವು ಅಪರೂಪದ ಸಂದರ್ಭಗಳಲ್ಲಿ ಎರಡು ಮೂರು ಸಲ ಪ್ರಯತ್ನಿಸಬೇಕಾಗಿತ್ತು ಅನ್ನುವುದೇನೋ ನಿಜ).

ಐದನೆಯ ಹೆಜ್ಜೆ – ಸ್ನೇಹಿತನ ಒತ್ತಾಯ

''ಗ್ರೊ ಓಲ್ಡ್ ಅಲಾಂಗ್ ವಿತ್ ಮಿ'' ಎಂಬ ಹೆಸರಿನ ಒಂದು ಕಿರು ಕಾದಂಬರಿಯನ್ನು ಎಲ್ಲೂ ಪ್ರಕಟಿಸಲಾಗಲಿಲ್ಲ. ''ಸ್ಟಾರ್ಟಿಂಗ್ ಸ್ಟೋರೀಸ್'' ಪತ್ರಿಕೆಗಾಗಿ ಅವರ ಅಪೇಕ್ಷೆಯ ಮೇಲೆ ಅದನ್ನು ಬರೆದಿದ್ದೆ. ಅವರು ಅದನ್ನು ತಿರಸ್ಕರಿಸಿದ್ದರು. ಹೀಗಾಗಿದ್ದು ''ನೈಟ್‌ಫಾಲ್'' ಪ್ರಕಟವಾದ ಆರು ವರ್ಷಗಳ ನಂತರ 1947ರಲ್ಲಿ. ಆಗ ನನಗೆ ಕೇವಲ 27 ವರ್ಷ. 1930ರಲ್ಲಿ ಜನಪ್ರಿಯ ವಿಜ್ಞಾನ ಕಥಾಲೇಖಕರಾಗಿ ಪ್ರಸಿದ್ಧರಾಗಿದ್ದ ಎಡ್ ಅರ್ಲ್‌ರೆಪ್ ಮತ್ತು ಹಾರ್ಲ್ ವಿನ್ಸೆಂಟ್ ಅವರಂತೆ ನಾನು ಅಧಃ ಪತನದ ಹಾದಿ ಹಿಡಿದಿದ್ದೆ.

ಎರಡು ವರ್ಷಗಳ ನಂತರ ಡಬಲ್‌ಡೇ ಸಂಸ್ಥೆಯವರು ವೈಜ್ಞಾನಿಕ ಕಾದಂಬರಿಗಳನ್ನು ಹಾರ್ಡ್‌ಕವರ್‌ನಲ್ಲಿ ಪ್ರಕಟಿಸಲು ನಿರ್ಧರಿಸಿದರು. ಅವರಿಗೆ ಇಂಥ ಕಾದಂಬರಿಗಳು ಬೇಕಾಗಿದ್ದವು. ಪ್ರಕಾಶಕರ ಅಗತ್ಯಗಳನ್ನು ತಿಳಿದುಕೊಳ್ಳುವಲ್ಲಿ ನನಗಿರುವ ಅಸಾಧಾರಣ ಅಸಾಮರ್ಥ್ಯದಿಂದಾಗಿ ನನಗೆ ಈ ಯಾವ ವಿಷಯಗಳೂ ತಿಳಿದಿರಲಿಲ್ಲ.

ಆದರೆ ನನಗೊಬ್ಬ ಸ್ನೇಹಿತನಿದ್ದ - ಫ್ರೆಡ್ ಪೋಹ್ಲ್

ಅವನು ನನ್ನ ಬಳಿ ಬಂದು ಹೇಳಿದ ''ಡಬಲ್‌ಡೇ ಕಾದಂಬರಿಗೆ ಹುಡುಕಾಡುತ್ತಿದ್ದಾರೆ. ನೀನು ಸ್ಟಾರ್ಟಿಂಗ್ ಗೆ ಬರೆದ ಕಾದಂಬರಿಯನ್ನು ಯಾಕೆ ಕಳಿಸಬಾರದು?''

ನಾನು ಹೇಳಿದೆ: ''ಫ್ರೆಡ್ ಅದು ಕೇವಲ 40,000 ಪದಗಳ ಕಾದಂಬರಿ - ಕೆಟ್ಟ ಕಾದಂಬರಿ''

''ಅವರಿಗೆ ಅದು ಸೇರಿದರೆ, ನೀನು ಅದನ್ನು ಸ್ವಲ್ಪ ಹಿಗ್ಗಿಸಬಹುದು. ಅದೊಂದು ಕೆಟ್ಟ ಕಾದಂಬರಿ ಅಂತ ನೀನೇ ಅವರಿಗೆ ಹೇಳದಿದ್ದರೆ, ಅದು ಅವರಿಗೆ ಪತ್ತೆಯಾಗದಿರಬಹುದು'' ಎಂದ.

ಮತ್ತೊಂದು ಸಲ ಅದು ತಿರಸ್ಕೃತವಾಗುವುದು ನನಗೆ ಬೇಡವಾಗಿತ್ತು. ಆದ್ದರಿಂದ ನಾನು ಹೇಳಿದೆ, ನಾನು ಅದನ್ನು ಕಳಿಸದಿರುವುದೇ ಉತ್ತಮ.

''ನೀನು ಕಳಿಸಲೇಬೇಕು'' ಎಂದು ಫ್ರೆಡ್ ಒತ್ತಾಯಪಡಿಸಿದ. ಅವನ ಮೊಂಡುತನಕ್ಕೆ ಬಲಿಯಾಗಿ, ಕಾದಂಬರಿಯನ್ನು ಅವನ ಕೈಲಿಟ್ಟೆ. ಅವನು ಅದನ್ನು ಡಬಲ್‌ಡೇ ಪ್ರಕಾಶಕರ ಕೈಲಿಟ್ಟ. ಡಬಲ್‌ಡೇ ಅದನ್ನು ಸ್ವೀಕರಿಸಿ, 70,000 ಪದಗಳ ಗಾತ್ರಕ್ಕೆ ಅದನ್ನು ವಿಸ್ತರಿಸುವಂತೆ ನನಗೆ ಹೇಳಿತು. ''ಪೆಬ್ಲ್ ಇನ್ ದಿ ಸ್ಕೈ'' ಎಂಬ ಹೆಸರಿನಲ್ಲಿ ಅದು 1950ರ ಜನವರಿಯಲ್ಲಿ ಪ್ರಕಟವಾಯಿತು. ಅನಂತರ ನನಗೆ ಬಂದ 74 ಡಬಲ್‌ಡೇ ಲೆಕ್ಕ ಪಟ್ಟಿಯಲ್ಲೂ ಈ ಕಾದಂಬರಿಯಿಂದ ನನಗೆ ಸಂದಾಯವಾಗಿರುವ ಆದಾಯದ ಉಲ್ಲೇಖವಿದೆ.

ಅದಕ್ಕಿಂತ ಮುಖ್ಯವಾದ ವಿಷಯವೆಂದರೆ ಈ ಕಾದಂಬರಿಯಿಂದಾಗಿ ನನ್ನ ಹಸ್ತಪ್ರತಿಗಳನ್ನು ದೂಸರಾ ಮಾತಿಲ್ಲದೆ ಒಪ್ಪಿಕೊಳ್ಳುವಂತಹ ಒಳ್ಳೆಯ ಬುದ್ಧಿ ಡಬಲ್‌ಡೇಗೆ ಬಂದದ್ದು. ಇದುವರೆಗೆ ಅವರು ನನ್ನ 102 ಪುಸ್ತಕಳನ್ನು ಪ್ರಕಟಿಸಿದ್ದಾರೆ ಮತ್ತು ಹಲವಾರು ಅಚ್ಚಿನಲ್ಲಿವೆ.

ನಾನು ಕೇವಲ ಪತ್ರಿಕೆಗಳಿಗೆ ಸಣ್ಣ ಕಥೆಗಳನ್ನು ಬರೆದುಕೊಂಡೇ ಸಾಕಷ್ಟು ಯಶಸ್ಸು ಗಳಿಸಬಹುದಾಗಿತ್ತು, ಆದರೆ ಕಾದಂಬರಿಗಳನ್ನು ಬರೆಯದಿದ್ದರೆ ಇಂದಿಗಿಂತ ಎಷ್ಟೋ ಪಾಲು ಬಡಲೇಖಕನಾಗೇ ಉಳಿಯುತ್ತಿದ್ದೆ, ಪ್ರಾಯಶಃ ಇಷ್ಟೊಂದು ಜನಪ್ರಿಯ ಲೇಖಕನಾಗಿಯೂ ಇರುತ್ತಿರಲಿಲ್ಲ. ನಿಜ ಹೇಳಬೇಕೆಂದರೆ, 1949ರ ಆದಿನ ಫ್ರೆಡ್ ನನ್ನ ಕಥೆಯನ್ನು ಕಳಿಸಲು ಒತ್ತಾಯಮಾಡದೆ ಇದ್ದರೆ ನಾನು ಗ್ರ್ಯಾಂಡ್ ಮಾಸ್ಟರ್ ಕಸಬಿಗೆ

ಅರ್ಹತೆ ಗಳಿಸುತ್ತಲೇ ಇರಲಿಲ್ಲವೇನೋ.

ಆರನೆಯ ಹೆಜ್ಜೆ - ವಿಮರ್ಶಕ ಕೇಳಿದ ಒಂದು ಪ್ರಶ್ನೆ

1957ರಲ್ಲಿ ನಾನು ನನ್ನ ಕಾದಂಬರಿ 'ನೇಕೆಡ್‌ಸನ್' ಅನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದೆ. ಅದೊಂದು ವೈಜ್ಞಾನಿಕ ರಹಸ್ಯ ಕಥೆ. ಅದರಲ್ಲಿ ಒಂದು ಪ್ರೇಮಕಥೆಯೂ ಪ್ರಾಸಂಗಿಕವಾಗಿ ಅಡಕವಾಗಿದ್ದು ಪ್ರೇಮಿಗಳ ಮಾರ್ಮಿಕ ಪ್ರಸಂಗದೊಂದಿಗೆ ಮುಕ್ತಾಯವಾಗಿತ್ತು. ಆ ಪುಸ್ತಕವನ್ನು ವಿಮರ್ಶಿಸಿದ ಡಾಮನ್ ನೈಟ್‌ಗೆ ಕಥೆಯ ರಹಸ್ಯ ವಸ್ತು ಏನೇನೂ ಸ್ವಾರಸ್ಯಕರವಾಗಿ ಕಾಣದೆ ಹೋಯಿತು. ಆದರೂ ಅವನು ಪ್ರೇಮಕಥೆಯನ್ನು ಮೆಚ್ಚಿಕೊಂಡಿದ್ದ. ತನ್ನ ವಿಮರ್ಶೆಯಲ್ಲಿ ಅವನು ನನಗೊಂದು ಪ್ರಶ್ನೆ ಹಾಕಿದ್ದ: ''ಅಸಿನೋವ್, ನೀನು ಈ ರೀತಿ ಬರೆಯಬಲ್ಲೆಯಾದರೆ, ವೈಜ್ಞಾನಿಕ ಕಥೆಗಳನ್ನು ಬರೆಯಲು ಯಾಕೆ ಸುಳ್ಳೇ ತಿಣುಕುತ್ತೀ?'' ವಿಮರ್ಶೆ ಬಂದ ಆ ಪತ್ರಿಕೆಯಲ್ಲೇ ಅವನಿಗೆ ಉತ್ತರ ಕೊಟ್ಟೆ: ''ಯಾಕೆಂದರೆ ನಾನು ವೈಜ್ಞಾನಿಕ ಕಥೆಗಳನ್ನು ಪ್ರೀತಿಸುತ್ತೇನೆ. ಬೇರೆ ಏನೇ ಆದರೂ, ವೈಜ್ಞಾನಿಕ ಕಥೆಗಳನ್ನು ಬರೆಯುವುದನ್ನು ಎಂದೂ ನಿಲ್ಲಿಸುವುದಿಲ್ಲ.''

ಅದರ ಮುಂದಿನ ವರ್ಷವೇ 1958ರಲ್ಲಿ ಇದ್ದಕ್ಕಿದ್ದಂತೆ ನನಗೆ ವೈಜ್ಞಾನಿಕ ಕಥೆಗಳ ಮೇಲೆ ಜೀಹಾಸೆ ಹುಟ್ಟಿತು. ದಿನೇಕೆಡ್ ಸನ್‌ನ ಮುಂದಿನ ಭಾಗ ಟೈಪ್‌ರೈಟರ್ ಮೇಲೆ ಅಸುನೀಗಿತು. ಆಗ ಸೃಜನೇತರ ವೈಜ್ಞಾನಿಕ ಸಾಹಿತ್ಯ ಬರೆಯಬೇಕೆಂಬ ಬಯಕೆ ನನಗೆ ಮೂಡಿತು. ಆದರೂ ಕಥಾ ಸಾಹಿತ್ಯವನ್ನು ಬರೆಯುವುದನ್ನು ಹೇಗೆ ತಡೆಯಲಿ? ಡಾಮನ್‌ಗೆ ನಾನು ಕೊಟ್ಟ ಉತ್ತರ ನೆನಪಿಗೆ ಬಂತು. ನನ್ನ ವೃತ್ತಿ ಪ್ರೇಮದಿಂದ ವಿಮುಖನಾಗಲು ಸಾಧ್ಯವೇ ಇರಲಿಲ್ಲ.

ನಾನು ಮೀನಮೇಷ ಎಣಿಸುತ್ತಿದ್ದಾಗ 'ದಿ ಮ್ಯಾಗಜೀನ್ ಆಫ್ ಫ್ಯಾಂಟಸಿ ಅಂಡ್ ಸೈನ್ಸ್ ಫಿಕ್ಷನ್'ನ ಸಂಪಾದಕ ರಾಬರ್ಟ್ ಪಿ. ಮಿಲ್ಸ್ ಒಂದು ಮುಸುಕ ಅಂಕಣವನ್ನು ಬರೆಯುವಂತೆ ಹೇಳಿದ. ಸೃಜನೇತರ ಬರವಣಿಗೆಯನ್ನು ಬಿಡದೆ ವೈಜ್ಞಾನಿಕ ಕಥೆಗಳ ಬರಹವನ್ನೂ ಮಾಡಬಹುದಾದ ಆ ಅವಕಾಶವನ್ನು ನಾನು ಭದ್ರವಾಗಿ ಅಪ್ಪಿಕೊಂಡೆ. ವಿಜ್ಞಾನ ಬರಹದ ಮೊದಲ ಅಂಕಣ ಎಫ್ ಅಂಡ್ ಎಸ್.ಎಫ್.ನ 1958ರ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾಯಿತು, 29 ವರ್ಷಗಳ ನಂತರ ಈಗಲೂ ಮುಂದುವರೆದಿದೆ. ನಾನು ವೈಜ್ಞಾನಿಕ ಕಥಾ ಸಾಹಿತ್ಯವನ್ನು ಪೂರ್ತಿಯಾಗಿ ಬಿಟ್ಟುಬಿಡಲಿಲ್ಲ ಎಂಬ ಸಂಗತಿಯನ್ನು ಗಮನಿಸಿ. ಮಧ್ಯಂತರದಲ್ಲಿ ನಾನು ಎರಡು ಕಾದಂಬರಿಗಳು ಮತ್ತು ಡಜನ್‌ಗಟ್ಟಳೆ ಸಣ್ಣ ಕಥೆಗಳನ್ನು ಬರೆದೆ. ಆದರೆ ನನ್ನ ಮೊದಲಿನ ಬರಹದ ಪ್ರಮಾಣಕ್ಕೆ ಹೋಲಿಸಿದರೆ ಇದು ಅತ್ಯಲ್ಪ. ಡಾಮನ್‌ನ ಪ್ರಶ್ನೆ, ಅದಕ್ಕೆ ನಾನು ಕೊಟ್ಟ ಉತ್ತರವನ್ನು ಅನುಸರಿಸಿ ಬಂದ ಎಫ್ ಅಂಡ್ ಎಸ್. ಎಫ್. ನ ಅಂಕಣ ಸಾಹಿತ್ಯ ಸೃಷ್ಟಿಯಾಗದಿದ್ದಲ್ಲಿ ಡೇವಿಡ್ ಹೆಚ್. ಕೆಲ್ಲರ್ ನನ್ನು ಜನ ಮರೆತುಬಿಟ್ಟಂತೆ ನನ್ನನ್ನೂ ನನ್ನ ಅಭಿಮಾನಿಗಳು

ಮರೆತುಬಿಡುತ್ತಿದ್ದರು.

ಆ ಅಂಕಣಬರಹ 1977ರಲ್ಲಿ 'ಐಸಾಕ್ ಅಸಿಮೋವ್'ಸ್ ಸೈನ್ಸ್ ಫಿಕ್ಷನ್ ಮ್ಯಾಗಜೀನ್ ಅಸ್ತಿತ್ವಕ್ಕೆ ಬರುವವರೆಗೂ ಆನಂತರ 1981ರಲ್ಲಿ ಡಬಲ್‌ಡೇ ಪ್ರಕಾಶಕರು ನಾನು ಕಾದಂಬರಿಗಳನ್ನು ಬರೆಯಬೇಕೆಂದು ಆಗ್ರಪಡಿಸುವವರೆಗೂ ನನ್ನನ್ನು ಜೀವಂತವಾಗಿಟ್ಟಿತು. ಆ ಅಂಕಣ ನನ್ನ ಬರಡು ಕಾಲದಲ್ಲಿ ಸದಾ ಸಾರ್ವಜನಿಕರ ಗಮನದಲ್ಲಿ ನಾನಿರುವಂತೆ ಅವಕಾಶಮಾಡಿಕೊಟ್ಟು ಗ್ರಾ್ಯಂಡ್ ಮಾಸ್ಟರ್ ಪದವಿ ಗಳಿಸಲು ಅವಕಾಶ ಮಾಡಿಕೊಟ್ಟಿತು.

ಏಳನೇ ಹೆಜ್ಜೆ-ಬದುಕಿ ಉಳಿದೆ

ಸ್ವಾಭಾವಿಕವಾಗಿಯೇ ನನ್ನ ಬದುಕಿನಲ್ಲೂ ಏಳು-ಬೀಳುಗಳಿದ್ದವು. 1972ರಲ್ಲಿ ನನಗೆ ಹೈಮಿಥೈರಾಯ್ಡಕ್ಟಮಿ ಶಸ್ತ್ರಚಿಕಿತ್ಸೆಯಾಯಿತು. 1977ರಲ್ಲಿ ಒಮ್ಮೆ ಲಘು ಹೃದಯಾಘಾತವಾಯಿತು. ಎರಡರಿಂದಲೂ ಪಾರಾದೆ, ಆಮೇಲೆ 1983ರಲ್ಲಿ ಇದ್ದಕ್ಕಿದ್ದಂತೆ ಎದೆನೋವು ವಿಪರೀತವಾಗಿ ನನ್ನ ಮನೆಯ ಅಂಗಳದಷ್ಟು ಉದ್ದ ನಡೆಯುವುದೂ ಅಸಾಧ್ಯವಾಯಿತು. 1983ರ ಡಿಸೆಂಬರ್ 14ರಂದು ಟ್ರಿಪ್ಲ್ ಬೈಪಾಸ್ ಶಸ್ತ್ರಕ್ರಿಯೆಗೆ ಒಳಗಾಗಿ ನಿಪುಣ ಶಸ್ತ್ರವೈದ್ಯರ ಕೃಪೆಯಿಂದ ಸಂಪೂರ್ಣವಾಗಿ ಚೇತರಿಸಿಕೊಂಡೆ. ಮರುದಿನ ಬೆಳಗ್ಗೆ ಶಸ್ತ್ರವೈದ್ಯರಿಗೆ ಹೇಳಿದೆ: ''ಶಸ್ತ್ರಕ್ರಿಯೆ ಸರಿಯಾಗಿ ನಡೆಯಿತು ಅಂತ ನರ್ಸ್ ಹೇಳಿದಳು.'' ''ಏನು ಹಾಗಂದರೆ, 'ಸರಿಯಾಗಿ'? ಶಸ್ತ್ರಕ್ರಿಯೆ ಪರಮೋತ್ಕಷ್ಟವಾಗಿತ್ತು'' ಎಂದರು.

ಅದು ಅವರೆಂದ ಹಾಗೇ ಇರಬೇಕು, ಇಲ್ಲದಿದ್ದರೆ, ಈಗ ನನಗೆ ಒಂದು ಪ್ರಶಸ್ತಿಯನ್ನು ಕೊಡುವ ಅವಕಾಶವೇ ಇರುತ್ತಿರಲಿಲ್ಲ. ಈ ಗ್ರಾ್ಯಂಡ್ ಮಾಸ್ಟರತ್ವಕ್ಕೆ ನಾನು ಆ ಸರ್ಜನ್‌ಗೆ ಋಣಿ.

ಉಪಸಂಹಾರ? ಸರಳವಾಗಿದೆ. ಪ್ರಶಸ್ತಿಗಳಿಸಲು ನಾನು ಏನೂ ಮಾಡಿಲ್ಲ. ನನ್ನ ತಂದೆ ತಾಯಿಗಳು ನನ್ನನ್ನು ಇಲ್ಲಿಗೆ ಕರೆದುತರದಿದ್ದರೆ; ನನ್ನ ಹೆಸರನ್ನು ನಾನು ಉಳಿಸಿಕೊಳ್ಳಲು ನನ್ನ ತಾಯಿ ಬಿಡದಿದ್ದರೆ; ಸಬ್‌ವೇ ಮಾರ್ಗ ನನಗೆ ಹತ್ತಿರದಲ್ಲಿರದಿದ್ದರೆ; ಆಯತ ಸಮಯದಲ್ಲಿ ನಾನು ಕ್ಯಾಂಬೆಲ್‌ನ ಕಾರ್ಯಾಲಯಕ್ಕೆ ಕಾಲಿಡದಿದ್ದರೆ; ಫ್ರೆಡ್‌ಪೋಹ್ಲ್ ಒತ್ತಾಯ ಮಾಡದಿದ್ದರೆ; ಡಾನಮ್‌ನೈಟ್ ಒಂದು ಪ್ರಶ್ನೆ ಕೇಳದಿದ್ದರೆ; ಒಬ್ಬ ಸರ್ಜನ್ ಪ್ರಸನ್ನತೆಯಿಂದ ಇರುವ ದಿನವಾಗದಿದ್ದರೆ ನನ್ನಲ್ಲಿ ಏನೂ ಉಳಿಯುತ್ತಿರಲಿಲ್ಲ. ಈಗಂತೂ ನಾನು ಗ್ರಾ್ಯಂಡ್‌ಮಾಸ್ಟರ್ ಇದಕ್ಕೆಲ್ಲಾ ನಾನೇ ಏಕಮೇವಾದ್ವಿತೀಯನಾಗಿ

ಕಾರಣನಾಗಿದ್ದರೆ ಹೇಗೋ ಹಾಗೆ ನಾನು ಸಂಪ್ರೀತನಾಗಿದ್ದೇನೆ.

Registered No. B G W - 180

ಸಾದರವಾಗುತ್ತಿವೆ
ಭಾರತದ ಅತ್ಯಂತ ಶೃಂಗಾರಮಯ
ವಾಚುಗಳು



ಉತ್ಸವ್ ವಾಚುಗಳು... ತುಂಬಾ ವಿಶೇಷ ಸಂದರ್ಭಗಳಿಗಾಗಿ ಪೂರ್ತಿಯಾಗಿ ಅಲಂಕೃತವಾಗಿವೆ. ಸ್ತ್ರೀ ಲಾವಣ್ಯಕ್ಕೆ ಒಪ್ಪುವಂತಹ ವಿನ್ಯಾಸಗಳಿಂದ ಕಂಗೊಳಿಸುವ ಡಯಲ್‌ಗಳೊಂದಿಗೆ. ಇವು ನೋಡಲು ನಿಜವಾಗಿಯೂ ಅತಿ ಸುಂದರ.

ಈ ಕಲಾಕೃತಿಗಳು 5 ಮೈಕ್ರಾನ್ ಚಿನ್ನದ ಮುಲಾಮಿನ ಬ್ರೇಸ್‌ಲೆಟ್‌ಗಳನ್ನು ಹೊಂದಿವೆ. ಅತಿ ವಿಶೇಷ ಸಂದರ್ಭಗಳಿಗೆ ಶೋಭೆಯನ್ನು ನೀಡುತ್ತವೆ.

ಅತ್ಯುತ್ತಮವಾಗಿ ಸಿಂಗರಿಸಿಕೊಳ್ಳುವ ಸ್ತ್ರೀಯ ವಾಚ್ ಸಹ ಅಲಂಕಾರಪ್ರಾಯವಾಗಿರಬೇಕಲ್ಲವೇ?

hmt
utsav

ಎಚ್‌ಎಮ್‌ಟಿ, ಟೈಂ ಆರ್ಟ್, ಎಚ್‌ಎಮ್‌ಟಿ ಕಂಪೆನಿ ಷೋರೂಮ್ ಮತ್ತು ಎಚ್‌ಎಮ್‌ಟಿ ವಿಶಿಷ್ಟ ಷೋರೂಮ್‌ಗಳು ಹಾಗೂ ಅನುಮೋದಿತ ರೀಟೇಲ್ ಅಂಗಡಿಗಳಲ್ಲಿ ಲಭ್ಯ.

Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 00‸
Printed at IMPRESSIONS. 404. Sampige Road, Malleswaram, Bangalore-560 003.
Editor : M. SHIVAKUMAR.